ಶಾಲಾ ಶಿಕ್ಷಣ ಇಲಾಖೆ

# ನಲಿಕಲಿ

## ಅಭ್ಯಾಸ ಸಹಿತ ಪಠ್ಯಪುಸ್ತಕ

## ಭಾಗ – 1

# ಕನ್ನಡ

# 3

## ಮೂರನೇ ತರಗತಿ

© KTBS NOT TO BE REPUBLISHED

**ಸಮಗ್ರ ಶಿಕ್ಷಣ, ಕರ್ನಾಟಕ**
ನೃಪತುಂಗ ರಸ್ತೆ
ಬೆಂಗಳೂರು – 560 001

**ಕರ್ನಾಟಕ ಪಠ್ಯಪುಸ್ತಕ ಸಂಘ**
6ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು – 560 003

## ಸಾಹಿತ್ಯ ಪರಿಕಲ್ಪನೆ

| | |
|---|---|
| **ಶ್ರೀ ವಿಕಾಸ್ ಕಿಶೋರ್ ಸುರಳ್ಕರ್ ಭಾ.ಆ.ಸೇ.**<br>ಆಯುಕ್ತರು<br>ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು | **ಡಾ. ಕೆ. ವಿದ್ಯಾಕುಮಾರಿ ಭಾ.ಆ.ಸೇ.**<br>ರಾಜ್ಯ ಯೋಜನಾ ನಿರ್ದೇಶಕರು<br>ಸಮಗ್ರ ಶಿಕ್ಷಣ ಕರ್ನಾಟಕ |

| | | |
|---|---|---|
| **ಶ್ರೀ ಮಾರುತಿ ಎಂ.ಆರ್.**<br>ನಿರ್ದೇಶಕರು (ಗುಣಮಟ್ಟ)<br>ರಾಜ್ಯ ಯೋಜನಾ ನಿರ್ದೇಶಕರ ಕಛೇರಿ<br>ಸಮಗ್ರ ಶಿಕ್ಷಣ ಕರ್ನಾಟಕ | **ಶ್ರೀ ಕೆ. ಮಂಜುನಾಥ**<br>ಸಹ ನಿರ್ದೇಶಕರು (ಗುಣಮಟ್ಟ ಖಾತ್ರಿ – ಪ್ರಭಾರಿ)<br>ರಾಜ್ಯ ಯೋಜನಾ ನಿರ್ದೇಶಕರ ಕಛೇರಿ<br>ಸಮಗ್ರ ಶಿಕ್ಷಣ ಕರ್ನಾಟಕ | **ಶ್ರೀ ಬಿ. ಚಂದ್ರಶೇಖರ**<br>ಹಿರಿಯ ಕಾರ್ಯಕ್ರಮಾಧಿಕಾರಿ<br>ರಾಜ್ಯ ಯೋಜನಾ ನಿರ್ದೇಶಕರ ಕಛೇರಿ<br>ಸಮಗ್ರ ಶಿಕ್ಷಣ ಕರ್ನಾಟಕ |

## ಸಲಹೆ

| | | |
|---|---|---|
| **ಶ್ರೀ ಎಂ.ಎಸ್. ಬೇಗ್**<br>ವಿಶ್ರಾಂತ ನಿರ್ದೇಶಕರು<br>ಶಾಲಾ ಶಿಕ್ಷಣ ಇಲಾಖೆ<br>ಬೆಂಗಳೂರು | **ಡಾ॥ ಹರಿಪ್ರಸಾದ್.ಜಿ.ವಿ**<br>ಉಪನಿರ್ದೇಶಕರು<br>ಲೋಕ ಶಿಕ್ಷಣ, ಡಿಎಸ್ಇಆರ್‌ಟಿ<br>ಬೆಂಗಳೂರು | **ಶ್ರೀ ವಿಶ್ವನಾಥ ಕೆ.ವಿ.**<br>ಜಿಲ್ಲಾ ಉಪಯೋಜನಾ<br>ಸಮನ್ವಯಾಧಿಕಾರಿ<br>ಬೆಂಗಳೂರು ದಕ್ಷಿಣ ಜಿಲ್ಲೆ |

## ಕಾರ್ಯಕ್ರಮ ಸಂಯೋಜನೆ ಮತ್ತು ಮಾರ್ಗದರ್ಶನ

**ಡಾ॥ ಎಸ್. ಗುಣವತಿ**
ಸಹಾಯಕ ಯೋಜನಾ ಸಮನ್ವಯಾಧಿಕಾರಿ
ಬೆಂಗಳೂರು ದಕ್ಷಿಣ ಜಿಲ್ಲೆ (ರಾಮನಗರ)

## ಪಠ್ಯಪುಸ್ತಕ ರಚನೆಯ ಸಂಪನ್ಮೂಲ ಶಿಕ್ಷಕರ ವಿವರ

**ಶ್ರೀ ಆರ್.ಡಿ. ರವೀಂದ್ರ**
ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಲೋಕನಾಥಪುರ
ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

| | |
|---|---|
| **ಶ್ರೀ ಪ್ರಶಾಂತನಾಯ್ಕ.ಎಸ್.**<br>ಸಹ ಶಿಕ್ಷಕರು<br>ಸ.ಕಿ.ಪ್ರಾ.ಶಾಲೆ–ಮರ್ಲೆ ಹೊಸಹಳ್ಳಿ, ಚಿಕ್ಕಮಗಳೂರು<br>ತಾಲ್ಲೂಕು ಮತ್ತು ಜಿಲ್ಲೆ | **ಶ್ರೀ ರಂಗನಾಥ.ಎಸ್.ಆರ್.**<br>ಬಿ.ಆರ್.ಪಿ., ಬಿ.ಆರ್.ಸಿ.<br>ಚಿಕ್ಕಮಗಳೂರು,<br>ಚಿಕ್ಕಮಗಳೂರು ಜಿಲ್ಲೆ |
| **ಶ್ರೀ ರವಿ.ಬಿ.ಟಿ.**<br>ಸಂಪನ್ಮೂಲ ವ್ಯಕ್ತಿ<br>ಅಜೀಂ ಪ್ರೇಮ್‌ಜೀ ಫೌಂಡೇಷನ್<br>ಮಂಡ್ಯ ಜಿಲ್ಲೆ. | **ಶ್ರೀ ನಿರಂಜನ್ ಬಿ. ಮಕರವಳ್ಳಿ**<br>ಸಹ ಶಿಕ್ಷಕರು<br>ಸ.ಹಿ.ಪ್ರಾ.ಶಾಲೆ–ಹೋತನಹಳ್ಳಿ, ಹಾನಗಲ್ ತಾಲ್ಲೂಕು<br>ಹಾವೇರಿ ಜಿಲ್ಲೆ. |
| **ಶ್ರೀ ಶಾಂತಕುಮಾರ್.ಎಚ್.ಆರ್.**<br>ಚಿತ್ರಕಲಾ ಶಿಕ್ಷಕರು<br>ಕೆ.ಪಿ.ಎಸ್., ಕೆ.ಆರ್.ಪುರಂ<br>ಬೆಂಗಳೂರು ದಕ್ಷಿಣ ವಲಯ–04 | **ಶ್ರೀ ಸುರೇಶ. ರಾಮಕೃಷ್ಣ ಅರ್ಕಸಾಲಿ**<br>ಚಿತ್ರಕಲಾ ಶಿಕ್ಷಕರು<br>ಎಸ್.ಎಸ್.ಪಿ. ಸರಕಾರಿ ಪ್ರೌಢಶಾಲೆ ರಾಮನಗೊಪ್ಪ<br>ಕುಂದಗೋಳ ತಾ॥ ಧಾರವಾಡ ಜಿಲ್ಲೆ |

NOT TO BE REPUBLISHED © KTBS

# ಮುನ್ನುಡಿ

**ಆತ್ಮೀಯ ಶಿಕ್ಷಕ ಬಂಧುಗಳೆ ಹಾಗೂ ನೆಚ್ಚಿನ ಪೋಷಕರೆ. . . ,**

FLN ಕಲಿಕಾ ತತ್ವಗಳ ಅಡಿಯಲ್ಲಿ ಆಯ್ದ ಕಲಿಕಾ ಫಲಗಳನ್ನು ಆದ್ಯತೆಯಲ್ಲಿ ಪರಿಗಣಿಸಿ, ಮಕ್ಕಳಿಗೆ ಚಟುವಟಿಕೆಗಳನ್ನು ರೂಪಿಸಿರುವ ಪ್ರಯತ್ನವೇ ಈ ನಲಿಕಲಿ ಅಭ್ಯಾಸ ಸಹಿತ ಪಠ್ಯಪುಸ್ತಕಗಳು.

'ಬುನಾದಿ ಸಾಕ್ಷರತೆ'ಯ ಅಡಿಯಲ್ಲಿ ಪ್ರಥಮ ಭಾಷೆಯ ಕಲಿಕಾ ತತ್ವಗಳ ಅರಿವಿನೊಂದಿಗೆ ಭಾಷಾ ಮೌಖಿಕ ಸಂವಹನ ಕೌಶಲ, ಸಂಕೇತೀಕರಣ, ನಿರರ್ಗಳ ಓದು, ಗ್ರಹಿಕೆಯುಕ್ತ ಓದು ಮತ್ತು ಬರವಣಿಗೆಯ ಮೂಲ ಕೌಶಲಗಳ ಬಳಕೆಯಲ್ಲಿ ಪ್ರತೀ ಮಗುವೂ ಸ್ವಂತಿಕೆಯನ್ನು ಕಟ್ಟಿಕೊಳ್ಳುವಂತೆ ಹಲವಾರು ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿದೆ.

'ಬುನಾದಿ ಸಂಖ್ಯಾ ಜ್ಞಾನ'ದ ಅಡಿಯಲ್ಲಿ ಅಂಕೆ-ಸಂಖ್ಯೆಗಳ ಪೂರ್ವ ಕಲಿಕಾ ತತ್ವಗಳ ಅರಿವು, ಸಂಖ್ಯೆಗಳ ಕಲ್ಪನೆ, ಆಕೃತಿಗಳು-ವಿನ್ಯಾಸಗಳು, ಅಳತೆಗಳು ಮತ್ತು ದತ್ತಾಂಶ ಸಂಗ್ರಹಣೆಯ ಬಳಕೆಯನ್ನು ಪರಿಸರದ ನೆಲೆಗಟ್ಟಿನಲ್ಲಿ ಅರ್ಥೈಸಿಕೊಳ್ಳಲು ನೆರವಾಗುವಂತೆ ಹಲವಾರು ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ರೂಪಿಸಲಾಗಿದೆ.

1ನೇ ಮತ್ತು 2ನೇ ತರಗತಿಗೆ ಪರಿಸರ ಅಧ್ಯಯನ ವಿಷಯದ ಬದಲಿಗೆ 'ಆರೋಗ್ಯ ಮತ್ತು ಪರಿಸರ' ಎಂಬ ವಿಷಯದ ಅಡಿಯಲ್ಲಿ ಅತ್ಯಗತ್ಯವಾಗಿ ರೂಢಿಸಬೇಕಿರುವ ಆರೋಗ್ಯಕರ ಅಭ್ಯಾಸಗಳನ್ನು, ಪರಿಸರದ ಮೂಲಭೂತ ತಿಳುವಳಿಕೆಯ ಜ್ಞಾನ ಮತ್ತು ಅನ್ವಯ ಆಧಾರಿತ ಚಟುವಟಿಕೆಗಳನ್ನು ನೀಡಲಾಗಿದ್ದು, ಒಳಾಂಗಣ ಮತ್ತು ಹೊರಾಂಗಣ ಸನ್ನಿವೇಶಗಳಲ್ಲಿ ಚರ್ಚಿಸಿ, ಮಾಹಿತಿ / ದತ್ತಾಂಶ ಸಂಗ್ರಹಿಸಿ, ಯೋಜಿಸಿ, 21ನೇ ಶತಮಾನದ ಕೌಶಲ್ಯಗಳ ಸಹಿತ ಅನುಭವಗಳನ್ನು ಕಟ್ಟಿಕೊಳ್ಳಲು ನೆರವಾಗುವಂತೆ ಚಟುವಟಿಕೆಗಳನ್ನು ರೂಪಿಸಲಾಗಿದೆ.

ಎನ್.ಸಿ.ಇ.ಆರ್.ಟಿ., ಎ.ಪಿ.ಎಫ್., ಪ್ರಥಮ್, ಅಕ್ಷರ, ಧ್ವನಿ ಮತ್ತು ಇತರೆ ಸಂಸ್ಥೆಗಳ ಅಗತ್ಯ ಸಂಪನ್ಮೂಲಗಳನ್ನು ಮಕ್ಕಳ ಕಲಿಕಾ ಹಿತದೃಷ್ಟಿಯಿಂದ ಕೆಲವು ಚಟುವಟಿಕೆಗಳಲ್ಲಿ ಅಳವಡಿಸಿಕೊಂಡಿದ್ದು, ಇದೇ ಸಂದರ್ಭದಲ್ಲಿ ಅವುಗಳ ನೆರವು ಮತ್ತು ಕೃಪೆಯನ್ನು ಸಹ ಸ್ಮರಿಸಿದೆ. FLN ಆಧಾರಿತ ಪಠ್ಯವಸ್ತುವಿನ ಪ್ರಮುಖ ಆಶಯಗಳಿಗೆ ಪೂರಕವಾಗಿ ಪಠ್ಯಪುಸ್ತಕಗಳ ವಿನ್ಯಾಸಕ್ಕೆ ಅಗತ್ಯ ಕ್ರಮವಹಿಸಲಾಗಿದೆ. ಇದಕ್ಕೆ ಅನುಗುಣವಾಗಿ ತರಗತಿ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸಲು ಹಾಗೂ ಮೌಲ್ಯಾಂಕನ ಇಲ್ಲಿನ ಚಟುವಟಿಕೆಗಳನ್ನು ಆಯೋಜಿಸಲು ಕಾರ್ಯೋನ್ಮುಖರಾಗುವಂತೆ ಶಿಕ್ಷಕರಿಗೆ ಈ ಮೂಲಕ ಸೂಚಿಸಲಾಗಿದೆ. ಚಟುವಟಿಕೆಗಳನ್ನು ಮಾದರಿಯಾಗಿ ನೀಡಲಾಗಿದ್ದು, ಮಕ್ಕಳಿಗೆ ಯಾವುದೇ ರೀತಿಯ ಒತ್ತಡವಾಗದಂತೆ ಶಿಕ್ಷಕರು ಕ್ರಿಯಾಶೀಲ ಚಟುವಟಿಕೆಗಳನ್ನು ರೂಪಿಕೊಳ್ಳಲು ಮುಕ್ತ ಅವಕಾಶವನ್ನು ಕಲ್ಪಿಸಿದೆ.

ಎಂದಿನಂತೆ ಎಲ್ಲಾ ಹಂತದ ಸಹವರ್ತಿಗಳ ಹಿಮ್ಮಾಹಿತಿ ಮತ್ತು ಸಲಹೆಗಳನ್ನು ಸ್ವಾಗತಿಸಿದೆ. ಪುಸ್ತಕಗಳ ರಚನೆಗೆ ಶ್ರಮಿಸಿದ ಸಂಪನ್ಮೂಲ ತಜ್ಞರು ಮತ್ತು ಶಿಕ್ಷಕರ ಸಮೂಹವನ್ನು ಅಭಿನಂದಿಸುತ್ತಾ, ವಿವಿಧ ಹಂತದ ಅಧಿಕಾರಿಗಳು, ಕ್ಷೇತ್ರ ಹಂತದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳು ಶಾಲಾ ಭೇಟಿಯನ್ನು ನಿಯಮಿತವಾಗಿ ಕೈಗೊಳ್ಳುವ ಮೂಲಕ ಸಮರ್ಪಕ ಅನುಷ್ಠಾನ ಮತ್ತು ಅನುಪಾಲನೆಗೆ ಮುಂದಾಗುವಂತೆ ನಿರ್ದೇಶಿಸಿದೆ.

**ರಾಜ್ಯ ಯೋಜನಾ ನಿರ್ದೇಶಕರು**
**ಸಮಗ್ರ ಶಿಕ್ಷಣ ಕರ್ನಾಟಕ**

@KTBS
NOT TO BE REPUBLISHED

## ನನ್ನ ಕಲಿಕೆಯ ವಿಷಯಗಳು

# ಭಾಗ–1


| ಕ್ರ.ಸಂ. | ಘಟಕಗಳು | ಪುಟ ಸಂಖ್ಯೆ |
|---|---|---|
| * | ಸೇತುಬಂಧ – ಚಟುವಟಿಕೆಗಳು | 1 – 32 |
| ೧. | ಕಾಡಿಗೊಂದು ಟಿ.ವಿ ತರೋಣ | 33 – 44 |
| ೨. | ಅಮ್ಮ ಅಮ್ಮ (ಪದ್ಯ) | 45 – 57 |
| ೩. | ಸ್ವಾತಂತ್ರ್ಯ ದಿನಾಚರಣೆ | 58 – 77 |
| ೪. | ದುಡುಕಿನ ಫಲ (ಪದ್ಯ) | 78 – 87 |
| * | ಮೌಲ್ಯಾಂಕನ–ಸೂಚಿತ ಕಲಿಕಾ ಫಲಗಳು | 88 |


@KTBS NOT TO BE REPUBLISHED

ಸೇ.ಬಂ

# 1. ಆಲಿಸು–ಆನಂದಿಸು

ಸಾ

## ಬೆಕ್ಕಿನ ಬೇಟೆ



ಕಾಡುತ್ತಿದ್ದ ಇಲಿಯನೊಂದ
ಹಿಡಿದೆ ಬಹಳ ಶ್ರಮದಲಿ
ಇಷ್ಟದಂತೆ ತಿನುವೆ ಇದನು
ತುಂಬ ತುಂಬ ಖುಷಿಯಲಿ॥

ಬಿಲದ ಸಂಧಿಯಲ್ಲಿ ಕುಳಿತು
ನನ್ನ ನೋಡುತ್ತಿತ್ತದು।
ನಾನು ಇರದ ವೇಳೆಯಲ್ಲಿ
ಬಹಳ ಮೆರೆಯುತ್ತಿತ್ತದು॥

ಹಲವು ಬಾರಿ ಹಿಡಿಯ ಹೋಗಿ
ಸೋಲು ಕಂಡೆ ಅದಿರಲಿ।
ಕೈಗೆ ಸಿಗದೆ ನೆಗೆದು ನೆಗೆದು
ಓಡುತ್ತಿತ್ತು ಬಿಲದಲಿ ॥




ಒಂದುಪಾಯ ಮಾಡಿಬಿಟ್ಟೆ
ಯತ್ನ ಸಫಲವಾಯಿತು।
ನಡೆಯಲಿಲ್ಲ ಇಲಿಯ ಆಟ
ಓಟ ವ್ಯರ್ಥವಾಯಿತು॥

ಇಲಿಯು ಕೈಗೆ ಸಿಕ್ಕಿತು
ಇಲಿಯು ಕೈಗೆ ಸಿಕ್ಕಿತು।

**ಮೌಖಿಕ ಪ್ರಶ್ನೆಗಳು :**

* ಬೆಕ್ಕು ಇಲಿಯನ್ನು ಹಿಡಿಯಲು ಏಕೆ ಕಷ್ಟಪಡುತ್ತಿತ್ತು?
* ಬೆಕ್ಕು ಹೇಗೆ ಇಲಿಯನ್ನು ಬೇಟೆಯಾಡುತ್ತದೆ?

@KTBS NOT TO BE REPUBLISHED

ಸೇ.ಬಂ

# 2. ಮಂಗಗಳ ಉಪವಾಸ

ಸಾ



ಒಂದು ದೇಗುಲದ ಸಮೀಪ ಮಂಗಗಳು ವಾಸವಾಗಿದ್ದವು. ಪೂಜಾರಿ ಪ್ರತಿದಿನ ಮಂಗಗಳಿಗೆ ಬಾಳೆಹಣ್ಣನ್ನು ನೀಡುತ್ತಿದ್ದನು. ಒಂದೊಂದು ದಿನ ಪೂಜಾರಿ ಮಂಗಗಳಿಗೆ ಹಣ್ಣುಗಳನ್ನು ನೀಡಲು ಆಗುತ್ತಿರಲಿಲ್ಲ. ಆಗ ಮಂಗಗಳು ತಮ್ಮ ಆಹಾರವನ್ನು ತಾವೇ ಹುಡುಕಿ ಕೊಳ್ಳುತ್ತಿದ್ದವು.

ಅದೊಂದು ದಿನ ಹಿರಿಯ ಮಂಗವೊಂದು "ಮನುಷ್ಯರು ಉಪವಾಸ ವ್ರತ ಮಾಡುವಂತೆ ನಾವೇಕೆ ಮಾಡಬಾರದು?" ಎಂದಿತು. ಎಲ್ಲಾ ಮಂಗಗಳು ಒಪ್ಪಿ ಉಪವಾಸ ವ್ರತವನ್ನು ಪ್ರಾರಂಭಿಸಿಯೇ ಬಿಟ್ಟವು. ಸೂರ್ಯನು ನೆತ್ತಿಯ ಮೇಲೆ ಬರತೊಡಗಿದ. ಮಂಗಗಳಿಗೆ ವಿಪರೀತ ಹಸಿವಾಗತೊಡಗಿತು. ಒಂದು ಮಂಗವು "ನಾವೆಲ್ಲರೂ ಪಕ್ಕದ ತೋಟದಿಂದ ಬಾಳೆಹಣ್ಣುಗಳನ್ನು ತಂದಿಡೋಣ, ನಾಳೆ ತಿನ್ನಲು ಈಗಿನಿಂದಲೇ ತಯಾರಿ ಮಾಡಿಕೊಳ್ಳೋಣ" ಎಂದು ಸಲಹೆ ನೀಡಿತು.

NOT TO BE REPUBLISHED @KTBS

"ಹೌದು" ಎನ್ನುತ್ತಾ, ಎಲ್ಲವೂ ಪಕ್ಕದ ಬಾಳೆತೋಟಕ್ಕೆ ನುಗ್ಗಿ ಹತ್ತಾರು ಬಾಳೆಹಣ್ಣುಗಳನ್ನು ಕಿತ್ತು ತಂದವು. ಸೂರ್ಯ ತನ್ನ ಕೆಲಸ ಮುಗಿಸಿ ಹೊರಡತೊಡಗಿದ. ಒಂದು ಪುಟ್ಟ ಮಂಗವು "ದೊಡ್ಡಪ್ಪ... ಬಾಳೆಹಣ್ಣು ತಂದಾಗಿದೆ, ಸುಮ್ಮನೆ ಕುಳಿತುಕೊಳ್ಳುವುದೇ? ಸುಲಿದಿಟ್ಟರೆ ಆಗದೆ?" ಎಂದಿತು. ಕೂಡಲೇ ಎಲ್ಲಾ ಮಂಗಗಳು ಸಿಪ್ಪೆ ಸುಲಿಯತೊಡಗಿದವು, ಸ್ವಲ್ಪ ಸಮಯದ ಬಳಿಕ ಮತ್ತೊಂದು ಮಂಗವು "ಸಿಪ್ಪೆ ತೆಗೆದು ಕೈಯಲ್ಲಿಟ್ಟುಕೊಂಡರೆ ಏನು ಚೆನ್ನ? ಬಾಯೊಳಗಿಟ್ಟರೆ ಆಗದೆ?" ಎಂದಿತು. ಕ್ಷಣಮಾತ್ರದಲ್ಲಿ ಎಲ್ಲವೂ ಹಾಕಿಕೊಂಡವು.



"ಅಯ್ಯೋ ಎಷ್ಟೊತ್ತು ಎಂದು ಬಾಯಲ್ಲಿಟ್ಟುಕೊಳ್ಳುವುದು? ನುಂಗಿಯೇ ಬಿಡೋಣ" ಎಂದು ಹೇಳುತ್ತಾ ಎಲ್ಲವೂ ಗಬಗಬನೆ ಗುಳುಂ ಮಾಡಿಬಿಟ್ಟವು.

ಇದನ್ನೆಲ್ಲಾ ಗಮನಿಸುತ್ತಿದ್ದ ಹಿರಿಯ ಮಂಗ "ಉಪವಾಸ ಎಂಬುದು ಮನುಷ್ಯರಿಗೆ ಬಿಟ್ಟದ್ದು ನಮಗೆಲ್ಲ ಯಾಕೆ ಅದರ ಚಿಂತೆ?" ಎನ್ನುತ್ತಾ ತಾನು ಒಂದೆರಡು ಬಾಳೆಹಣ್ಣುಗಳನ್ನು ತಿಂದೇ.. ಬಿಟ್ಟಿತು. ಹೀಗೆ ಮಂಗಗಳು ತಮ್ಮ ಉಪವಾಸ ವ್ರತವನ್ನು ಅಂತ್ಯಗೊಳಿಸಿದವು.

## I. ಮೌಖಿಕ ಪ್ರಶ್ನೆಗಳು :

1. ಮಂಗಗಳು ಉಪವಾಸ ಮಾಡಲು ಕಾರಣವೇನು?
2. ಉಪವಾಸ ಮುಗಿದ ಮೇಲೆ ಮಂಗಗಳು ಊಟಕ್ಕೆ ಹೇಗೆ ಸಿದ್ಧತೆ ನಡೆಸಿದವು?
3. ಈ ಕಥೆಗೊಂದು ನಿಮ್ಮದೇ ಶೀರ್ಷಿಕೆಯನ್ನು ಊಹಿಸಿ ಹೇಳುವಿರಾ?

## II. ಈ ಹೇಳಿಕೆಗಳನ್ನು ಗಮನಿಸಿ ಕ್ರಮಾನುಗತವಾಗಿ ಬರೆಯಿರಿ.

1. "ಅಯ್ಯೋ ಎಷ್ಟೊತ್ತು ಎಂದು ಬಾಯಲ್ಲಿಟ್ಟುಕೊಳ್ಳುವುದು? ನುಂಗಿಯೇ ಬಿಡೋಣ"
2. "ದೊಡ್ಡಪ್ಪ... ಬಾಳೆಹಣ್ಣು ತಂದಾಗಿದೆ, ಸುಮ್ಮನೆ ಕುಳಿತುಕೊಳ್ಳುವುದೇ? ಸುಲಿದಿಟ್ಟರೆ ಆಗದೆ?"
3. "ಉಪವಾಸ ಎಂಬುದು ಮನುಷ್ಯರಿಗೆ ಬಿಟ್ಟದ್ದು ನಮಗೆಲ್ಲ ಯಾಕೆ ಅದರ ಚಿಂತೆ?"
4. "ನಾವೆಲ್ಲರೂ ಪಕ್ಕದ ತೋಟದಿಂದ ಬಾಳೆಹಣ್ಣುಗಳನ್ನು ತಂದಿಡೋಣ, ನಾಳೆ ತಿನ್ನಲು ಈಗಿನಿಂದಲೇ ತಯಾರಿ ಮಾಡಿಕೊಳ್ಳೋಣ"
5. "ಮನುಷ್ಯರು ಉಪವಾಸ ವ್ರತ ಮಾಡುವಂತೆ ನಾವೇಕೆ ಮಾಡಬಾರದು?" ಎಂದಿತು.

1. ____________________

____________________

2. ____________________

____________________

3. ____________________

____________________

4. ____________________

____________________

5. ____________________

____________________

@KTBS NOT TO BE REPUBLISHED

ಸೇ.ಬಂ

# 3. ಜಾತ್ರೆಯ ಸುತ್ತ ಒಂದು ಸುತ್ತು

ಸಾ

✦ ಸರಣಿ ಚಿತ್ರಗಳನ್ನು ಗಮನಿಸಿ ಸನ್ನಿವೇಶವನ್ನು ವಿವರಿಸೋಣ.





@KTBS
NOT TO BE REPUBLISHED





NOT TO BE REPUBLISHED @KTBS

ನೀನು ನೋಡಿರುವ ಜಾತ್ರೆಯಲ್ಲಿ ಆದ ಅನುಭವವನ್ನು ಗೆಳೆಯರೊಂದಿಗೆ ಹಂಚಿಕೊ.

ಸೇ.ಬಂ

# 4. ಕೆಲಸಗಳೂ ಮಾತನಾಡುತ್ತವೆ

ಸಾ

✦ ಇವರ ಕೆಲಸದ ಬಗ್ಗೆ ಮಾತನಾಡೋಣ.













©KTBS NOT TO BE REPUBLISHED

ನಿನ್ನ ಮನೆಯವರು ಮಾಡುವ ಕೆಲಸಗಳ ಬಗ್ಗೆ ಗೆಳೆಯರೊಂದಿಗೆ ಹಂಚಿಕೊ.

ಸೇ.ಬಂ

# 5. ಅಕ್ಷರ ಮರ

ಸಾ

✦ 'ಅ' ಯಿಂದ 'ಳ' ವರೆಗಿನ ಎಲ್ಲಾ ಅಕ್ಷರಗಳನ್ನು ಎಲೆಗಳಲ್ಲಿ ಬರೆಯೋಣ.



ಒಟ್ಟು ಅಕ್ಷರಗಳ ಸಂಖ್ಯೆ ☐

ಸೇ.ಬಂ

# 6. ಅಕ್ಷರಕ್ಕೊಂದು ಪದ

ಸಾ

✦ ಮಾದರಿಯಂತೆ ಅಕ್ಷರಕ್ಕೊಂದು ಪದ ಬರೆಯೋಣ.

| | | | | | |
|---|---|---|---|---|---|
| ಅ | ಅಮರ | ಗ | | ನ | |
| ಆ | | ಘ | | ಪ | |
| ಇ | | ಙ | ವಾಙ್ಮಯ | ಫ | |
| ಈ | | ಚ | | ಬ | |
| ಉ | | ಛ | | ಭ | |
| ಊ | | ಜ | | ಮ | |
| ಋ | | ಝ | | ಯ | |
| ಎ | | ಞ | ವಿಜ್ಞಾನ | ರ | |
| ಏ | | ಟ | | ಲ | |
| ಐ | | ಠ | | ವ | |
| ಒ | | ಡ | | ಶ | |
| ಓ | | ಢ | | ಷ | |
| ಔ | | ಣ | | ಸ | |
| ಅಂ | | ತ | | ಹ | |
| ಅಃ | | ಥ | | ಳ | |
| ಕ | | ದ | | | |
| ಖ | | ಧ | | | |

@KTBS NOT TO BE REPUBLISHED

ಸೇ.ಬಂ

# 7. ಗುಣಿತಾಕ್ಷರ ಓದು-ಬರಹ-ಅಭ್ಯಾಸ

ಸಾ

✦ ಕಲಿತಿದ್ದನ್ನು ನೆನಪಿಸಿಕೊಳ್ಳೋಣ.

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ | ಅಂ | ಅಃ |
| ್ | ಾ | ಿ | ೀ | ು | ೂ | ೃ | ೆ | ೇ | ೈ | ೊ | ೋ | ೌ | ಂ | ಃ |
| ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |

✦ ಗುಣಿತಾಕ್ಷರ ಬಳ್ಳಿ ಹೇಳುತ್ತಾ ಬರೆಯೋಣ.

| ಖ | ಖಾ | ಖಿ | ಖೀ | ಖು | ಖೂ | ಖೃ | ಖೆ | ಖೇ | ಖೈ | ಖೊ | ಖೋ | ಖೌ | ಖಂ | ಖಃ |
|---|---|---|---|---|---|---|---|---|---|---|---|---|---|---|
| ಗ | | | | | | | | | | | | | | |
| ಚ | | | | | | | | | | | | | | |
| ಜ | | | | | | | | | | | | | | |
| ಝ | | | | | | | | | | | | | | |
| ಟ | | | | | | | | | | | | | | |
| ಠ | | | | | | | | | | | | | | |

@KTBS
NOT TO BE REPUBLISHED

| | | | | | | | | | | | | | |
|---|---|---|---|---|---|---|---|---|---|---|---|---|---|
| ತ | ಧ | ನ | ಪ | ಭ | ಮ | ಯ | ರ | ಲ | ವ | ಶ | ಷ | ಹ | ಳ |

@KTBS
NOT TO BE REPUBLISHED

ಸೇ.ಬಂ

# 8. ಗುಣಿತಾಕ್ಷರ ಅಭ್ಯಾಸ

ಸಾ

✦ ಮಾದರಿಯಲ್ಲಿ ತೋರಿಸಿರುವಂತೆ ನೀಡಿರುವ ಗುಣಿತಾಕ್ಷರಗಳಲ್ಲಿರುವ ಸ್ವರ ಮತ್ತು ವ್ಯಂಜನಾಕ್ಷರ ಬಿಡಿಸಿ ಬರೆಯೋಣ.

| ಮಾದರಿ | ದ | ಮ | ಸ |
|---|---|---|---|
| ಕ=ಕ್+ಅ | | | |
| ಕಾ=ಕ್+ಆ | | | |
| ಕಿ=ಕ್+ಇ | | | |
| ಕೀ=ಕ್+ಈ | | | |
| ಕು=ಕ್+ಉ | | | |
| ಕೂ=ಕ್+ಊ | | | |
| ಕೃ=ಕ್+ಋ | | | |
| ಕೆ=ಕ್+ಎ | | | |
| ಕೇ=ಕ್+ಏ | | | |
| ಕೈ=ಕ್+ಐ | | | |
| ಕೊ=ಕ್+ಒ | | | |
| ಕೋ=ಕ್+ಓ | | | |
| ಕೌ=ಕ್+ಔ | | | |
| ಕಂ=ಕ್+ಅಂ | | | |
| ಕಃ=ಕ್+ಅಃ | | | |

@KTBS NOT TO BE REPUBLISHED

✦ ಮಾದರಿಯಂತೆ ನೀಡಿರುವ ಪದಗಳ ಅಕ್ಷರಗಳಲ್ಲಿನ ವ್ಯಂಜನಾಕ್ಷರ ಮತ್ತು ಸ್ವರಾಕ್ಷರಗಳನ್ನು ಬಿಡಿಸಿ ಬರೆಯೋಣ.

| | |
|---|---|
| ಮನೆ= ಮ್+ಅ+ನ್+ಎ | ಹಾವೇರಿ= |
| ಗಿಡ= | ಮೈಸೂರು= |
| ನಗರ= | ಸಾಗರ= |
| ಜಮೀನು= | ಕೋಲಾರ= |

ನಿನಗೆ ಪರಿಚಿತವಿರುವ ಪದಗಳ ವ್ಯಂಜನಾಕ್ಷರ ಮತ್ತು ಸ್ವರಾಕ್ಷರಗಳನ್ನು ಬಿಡಿಸಿ ನೋಟ್ ಪುಸ್ತಕದಲ್ಲಿ ಬರೆ.

# 9. ಒತ್ತಕ್ಷರ ಓದು–ಬರಹ–ಅಭ್ಯಾಸ



✦ ಮಾದರಿಯಂತೆ ಒತ್ತಕ್ಷರ ಬರೆಯೋಣ.

| ಜ | ಟ | ಣ | ಬ | ಖ | ವ | ಙ | ಞ |
|---|---|---|---|---|---|---|---|
| ್ಜ | ್ಟ | ್ಣ | ್ಬ | ್ಖ | ್ವ | ್ಙ | ್ಞ |
| ಜ್ಜ | | | | | | | |

| ಕ | ಗ | ಚ | ಟ | ಡ | ದ | ಪ | ಶ | ಷ | ಸ | ಳ |
|---|---|---|---|---|---|---|---|---|---|---|
| ್ಕ | ್ಗ | ್ಚ | ್ಟ | ್ಡ | ್ದ | ್ಪ | ್ಶ | ್ಷ | ್ಸ | ್ಳ |
| ಕ್ಕ | | | | | | | | | | |

| ಠ | ಘ | ಫ | ಝ | ಛ | ಧ | ಥ | ಢ | ಭ |
|---|---|---|---|---|---|---|---|---|
| ್ಠ | ್ಘ | ್ಫ | ್ಝ | ್ಛ | ್ಧ | ್ಥ | ್ಢ | ್ಭ |
| ಠ್ಠ | | | | | | | | |

| ಮ | ನ | ತ | ರ | ಲ | ಯ |
|---|---|---|---|---|---|
| ್ಮ | ್ನ | ್ತ | ್ರ | ್ಲ | ್ಯ |
| ಮ್ಮ | | | | | |

©KTBS NOT TO BE REPUBLISHED

ಸೇ.ಬಂ

# 10. ಅಕ್ಷರಕ್ಕೊಂದು ಒತ್ತು

ಸಾ

✦ ಈ ಪದಗಳನ್ನು ಸಜಾತಿ–ವಿಜಾತಿ ಒತ್ತಕ್ಷರಗಳ ಆಧಾರದಲ್ಲಿ ವಿಂಗಡಿಸಿ ಬರೆಯೋಣ.

| | | | |
|---|---|---|---|
| ನಮಸ್ಕಾರ | ಚಿತ್ತಾರ | ಅಪ್ಪ | ಉತ್ಸವ |
| ಹಬ್ಬ | ತೃಪ್ತಿ | ಪ್ರಸ್ತಾಪ | ದಿಕ್ಕು |
| ಕಷ್ಟ | ಪಲ್ಲಕ್ಕಿ | ರಶ್ಮಿ | ಕಡ್ಡಿ |
| ಮುಚ್ಚಳ | ಭಾಗ್ಯ | ಮಜ್ಜಿಗೆ | ಶಿಕ್ಷಕ |

| ಸಜಾತಿ ಒತ್ತಕ್ಷರದ ಪದಗಳು | | ವಿಜಾತಿ ಒತ್ತಕ್ಷರದ ಪದಗಳು | |
|---|---|---|---|
| | | | |
| | | | |
| | | | |
| | | | |

NOT TO BE REPUBLISHED @KTBS

✦ ಪದ್ಯವನ್ನು ಓದಿ ಒತ್ತಕ್ಷರದ ಪದಗಳನ್ನು ಹುಡುಕಿ ಬರೆಯೋಣ.

ಕಲ್ಲು ಮಣ್ಣು ನೀರುಗಾರೆ ಬೇಡ ಎಂದು ಭಾವಿಸಿ
ಹೊಸತು ಬಗೆಯ ಮನೆಯನೊಂದ ಕಟ್ಟಲೆಂದು ಯೋಚಿಸಿ
ಹುಲ್ಲುಕಡ್ಡಿ ಸೊಪ್ಪುಗರಿಯ ಕತ್ತೆ ಒಟ್ಟು ಮಾಡಿತು
ಕಿಟಕಿ ಕೊನೆಯ ಗೋಡೆ ಮಾಡಿ ಅಂದಚಂದ ಕಂಡಿತು





ಎಲ್ಲಾ ಪ್ರಾಣಿ ಪಕ್ಷಿಗಳನ್ನು ಕರೆದು ಮನೆಯ ತೋರಿತು
ಒಲೆಯ ಮೇಲೆ ಹಾಲು ಗಡಿಗೆ ಇರಿಸಿ ಬೆಂಕಿ ಹಚ್ಚಿತು
ಗಡಿಗೆಯಲ್ಲಿ ಇಟ್ಟ ಹಾಲು ಉಕ್ಕಿ ಮೇಲೆ ಬಂದಿತು
ಕತ್ತೆ ತನ್ನ ಗೆಳೆಯರಿಗೆ ಸಿಹಿಯ ಹಾಲು ಹಂಚಿತು

| | | | |
|---|---|---|---|
| | | | |
| | | | |
| | | | |
| | | | |

ಸೇ.ಬಂ

# 11. ಪದ ರಚನೆ

ಸಾ

✦ ಈ ಅಕ್ಷರಗಳನ್ನು ಬಳಸಿ ಪದ ರಚಿಸೋಣ.

| | | | | |
|---|---|---|---|---|
| ಸ | ಬ | ಪ | ಹ | ನ |
| ಲ | ಕ | ಳ | ವ | ರ |
| ಉ | ಆ | ಡ | ತ | ಮ |
| ನ | ಏ | ದ | ಚ | ಯ |
| ಅ | ಈ | ಜ | ಟ | ಗ |

| | |
|---|---|
| | |
| | |
| | |
| | |
| | |

✦ ಮಾದರಿಯಂತೆ ಪದ ರಚಿಸೋಣ.

| | | | | |
|---|---|---|---|---|
| ಮ | ಸ | ಸ | ರ | ಸಮರಸ |
| ನ | ಜ | ನ | ಮ | |
| ನ | ರ | ಸ | ವ | |
| ವ | ಲ | ರ | ಕ | |

@KTBS NOT TO BE REPUBLISHED

✦ ಕಲಿತ ಅಕ್ಷರಗಳನ್ನು ಬಳಸಿ ಪದಗಳ ಪಿರಮಿಡ್ ರಚಿಸೋಣ.



ಸೇ.ಬಂ

# 12. ಪದಬಾಣ – ಬಾಣದ ಪದ

ಸಾ

✦ ಗುಣಿತಾಕ್ಷರಗಳ ಸಹಾಯದಿಂದ ಪದಜಾಲ ರಚಿಸಿ ಪದಗಳನ್ನು ಬರೆಯೋಣ.




@KTBS
NOT TO BE REPUBLISHED




ರ, ಜ, ಮ, ಪ – ಈ ಅಕ್ಷರಗಳಿಗೆ ನೋಟ್ ಪುಸ್ತಕದಲ್ಲಿ ಪದಜಾಲ ರಚಿಸು.

ಸೇ.ಬಂ

# 13. ಪದದೊಳಗಿನ ಪದ

ಸಾ

✦ ಪದದಲ್ಲಿರುವ ಅಕ್ಷರಗಳನ್ನು ಬಳಸಿ ಹಲವು ಪದಗಳನ್ನು ರಚಿಸೋಣ.

| ಕರತಲಾಮಲಕ | ರಾಜಕುಮಾರರಿಗೆ |
| --- | --- |
| | |

| ವಿಜಯನಗರ | ರಾಜೀವಲೋಚನ |
| --- | --- |
| | |

@KTBS NOT TO BE REPUBLISHED

ಸೇ.ಬಂ

# 14. ಅಂತ್ಯಾಕ್ಷರ ಪದ

ಸಾ

✦ ಪದದ ಕೊನೆಯ ಅಕ್ಷರದಿಂದ ಆರಂಭವಾಗುವ ಪದ ಬರೆಯೋಣ.

ಮಾದರಿ:




@KTBS NOT TO BE REPUBLISHED

ಸೇ.ಬಂ

# 15. ಪದ ಹುಡುಕಾಟ

ಸಾ

✦ ಒತ್ತಕ್ಷರವಿರುವ ಯಾವುದಾದರೂ ಎಂಟು ಪದಗಳನ್ನು ಹುಡುಕಿ ಬರೆಯೋಣ.

| | | | | | |
|---|---|---|---|---|---|
| ಞ | ಕ್ಷ | ವಾ | ರ | ಸ್ವಾ | ರ |
| ಚ | ಸಂ | ಝು | ಕ್ತ | ಳ | ಕ್ಕ |
| ಕಿ | ಭ್ರ | ಮೆ | ಹ | ರೊ | ಸ |
| ಲೀ | ಮ | ಟೆ | ಕಾ | ವ್ಯ | ಬು |
| ಮು | ಈ | ಶ್ರೌ | ರ್ಯ | ಡಿ | ಷ |
| ಖ್ಯ | ಳಿ | ತ | ಕ್ರ | ಯ | ಪಿ |
| ಮಂ | ಆ | ಪಿ | ಮ | ಜಿ | ಪ |
| ತ್ರಿ | ಶೂ | ಲ | ರೇ | ರೊ | ಕ್ಕ |

@KTBS NOT TO BE REPUBLISHED

______ ______ ______ ______

______ ______ ______ ______

✦ ಸುಳಿವು ಅಕ್ಷರಗಳನ್ನು ಬಳಸಿ ಪದಗಳನ್ನು ಪೂರ್ಣಗೊಳಿಸೋಣ.

(ಗ್ಗ, ಡ್ಡಿ, ಟ್ನಿ, ಜ್ಜಿ, ಜ್ಜೆ, ಪ್ಪು)

| | | | | | | | | | | | |
|---|---|---|---|---|---|---|---|---|---|---|---|
| ಕ | | ಹ | | ಚಿ | | ಬ | | ಲ | | ಚ | |

(ಪ್ಪ, ಗ್ಗ, ಜ್ಜಿ, ಬ್ಬ)

| | | | | | | | | | | | |
|---|---|---|---|---|---|---|---|---|---|---|---|
| ಹೆ | | ಣ | ಮ | | ಗೆ | ದಿ | | ಣ | ಸ | | ಳ |

ಸೇ.ಬಂ

# 16. ವಾಕ್ಯ ರಚನೆ

ಸಾ

✦ ಮಾದರಿಯಂತೆ ವಾಕ್ಯಗಳನ್ನು ರಚಿಸೋಣ.

| | | |
|---|---|---|
| ರಾಜು | ಶಾಲೆಗೆ | ಹೋದನು |
| ಹುಡುಗಿಯರು | ಊರಿಗೆ | ಹೋಯಿತು |
| ಹುಲಿಯು | ಸಂತೆಗೆ | ಹೋದಳು |
| ಹುಡುಗರು | ಕಾಡಿಗೆ | ಹೋದರು |

ಮಾದರಿ: ರಾಜು ಸಂತೆಗೆ ಹೋದನು.

1. ________________

2. ________________

3. ________________

4. ________________

5. ________________

@KTBS NOT TO BE REPUBLISHED

✦ ಚಿತ್ರದ ಬದಲಿಗೆ ಪದಗಳನ್ನು ಸೇರಿಸಿ ಬರೆಯೋಣ.

1.  ಯು ಕಬ್ಬನ್ನು ತಿನ್ನುತ್ತದೆ. ________________

2.  ಗಳು ವನದಲ್ಲಿ ಆಡುತ್ತಿವೆ. ________________

3.  ಖುಷಿಯಿಂದ ಕುಣಿಯುತ್ತಿದ್ದಾರೆ. ________________

ಸೇ.ಬಂ

# 17. ವಾಕ್ಯ ರಚನೆ

ಸಾ

✦ ಸಂಖ್ಯಾ ಸುಳಿವಿನ ಸಹಾಯದಿಂದ ಗಾದೆ ಹುಡುಕಿ ಬರೆಯೋಣ.




@KTBS NOT TO BE REPUBLISHED

**ಗಾದೆ–1:** 2, 8, 4, 5 – ______________________________

______________________________

**ಗಾದೆ–2:** 9, 3, 1, 7 – ______________________________

______________________________

**ಗಾದೆ–3:** 10, 6, 14 – ______________________________

______________________________

**ಗಾದೆ–4:** 12, 16, 13 – ______________________________

______________________________

**ಗಾದೆ–5:** 17, 11 – ______________________________

**ಗಾದೆ–6:** 15, 18 – ______________________________

ಸೇ.ಬಂ

# 18. ಮುಂದಾಲೋಚನೆ

ಸಾ



ಒಂದು ಜೋಳದ ಹೊಲದಲ್ಲಿ ತನ್ನ ಪಕ್ಷಿಯೊಂದು ಮರಿಗಳೊಂದಿಗೆ ವಾಸವಾಗಿತ್ತು. ಅದು ತಾನು ಆಹಾರ ತರಲು ದಿನ ಹೊರಗೆ ಹೋಗುವಾಗ ಮಕ್ಕಳಿಗೆ ಹೀಗೆ ಹೇಳುತ್ತಿತ್ತು. "ಮನೆಯಿಂದ ಹೊರಗೆ ಕಾಣಿಸಿಕೊಳ್ಳಬೇಡಿ. ಹಾಗೆಯೇ ಹತ್ತಿರದಲ್ಲಿ ಯಾರಾದರು ಏನಾದರು ಮಾತನಾಡಿಕೊಂಡರೆ ನನಗೆ ತಿಳಿಸಿ" ಎಂದು ತನ್ನ ಮರಿಗಳಿಗೆ ಹೇಳಿ ಹೋಗುತ್ತಿತ್ತು.

ಒಂದು ದಿನ ತಾಯಿ ಪಕ್ಷಿ ಹೊರಗೆ ಹೋಗಿದ್ದಾಗ, ಹೊಲದ ರೈತ ಮತ್ತು ಅವನ ಮಗ ಮಾತನಾಡುತ್ತಿದ್ದರು. ರೈತ "ನೋಡು, ನಾಳೆ ಜೋಳವನ್ನು ಕೊಯ್ಯೋಣ, ನೆರೆಯವರಿಗೆ ಹೇಳು" ಎಂದನು. ರೈತನ ಮಾತನ್ನು ಮರಿಗಳು ತಾಯಿಗೆ ಹೇಳಿದವು. ಅದಕ್ಕೆ ತಾಯಿ ಪಕ್ಷಿಯು "ಹೆದರಬೇಡಿ ಮಕ್ಕಳೇ, ನಾಳೆ ಅವರು ಜೋಳ ಕುಯ್ಯುವುದಿಲ್ಲ" ಎಂದಿತು.

ಮರುದಿನ ಜೋಳ ಕುಯ್ಯಲು ಯಾರೂ ಬರಲಿಲ್ಲ. ಆದರೆ ಮತ್ತೆ ರೈತ ಮತ್ತು ಅವನ ಮಗ ಮಾತನಾಡಿಕೊಳ್ಳುತ್ತಿರುವುದು ಕೇಳಿಸಿತು. "ಬಹಳ ತಡವಾಗುತ್ತಿದೆ. ನಮ್ಮ ಬಂಧುಗಳಿಗೆ ಕರೆಯುತ್ತೇನೆ ನಾಳೆ ಕುಯ್ಯೋಣ" ಎಂದನು. ಈ ವಿಷಯವನ್ನು ಮರಿಗಳು ತಮ್ಮ ತಾಯಿಗೆ ತಿಳಿಸಿದವು. ಆಗಲೂ ತಾಯಿ ಪಕ್ಷಿಯು "ಹೆದರಬೇಡಿ ಮಕ್ಕಳೇ, ಅವರು ನಾಳೆಯೂ ಜೋಳ ಕುಯ್ಯುವುದಿಲ್ಲ" ಎಂದಿತು.



NOT TO BE REPUBLISHED ©KTBS

ಹಾಗೆಯೇ ಆಯಿತು. ಆಗ ರೈತನು ತನ್ನ ಮಗನಿಗೆ "ಬೇರೆಯವರನ್ನು ನಂಬಿದರೆ ಆಗುವುದಿಲ್ಲ. ನಾಳೆ ಬೆಳಗ್ಗೆ ನಾವಿಬ್ಬರೂ ಕೂಡಿ ಜೋಳ ಕುಯ್ಯೋಣ" ಎಂದನು. ಈ ವಿಷಯ ಕೇಳಿದ ತಾಯಿ ಪಕ್ಷಿಯು "ಹಾಗಾದರೆ ನಾಳೆ ಅವರು ಜೋಳವನ್ನು ಕುಯ್ದೆ ಕುಯ್ಯುತ್ತಾರೆ ಆದ್ದರಿಂದ ನಾವು ಬೇರೆ ಕಡೆಗೆ ಹೋಗೋಣ" ಎಂದು ಹೇಳಿತು.

## I. ಸರಿಯಾದ ಉತ್ತರಕ್ಕೆ ಸರಿ ಗುರುತು ಹಾಕಿ.

1. ಗೀಜಗ ________________ ಹೊಲದಲ್ಲಿ ವಾಸವಾಗಿತ್ತು.
   ಅ) ರಾಗಿಯ ಆ) ಹತ್ತಿಯ ಇ) ಜೋಳದ ಈ) ತೊಗರಿಯ

2. ರೈತನು ತನ್ನ ಮಗನಿಗೆ ಎರಡನೆ ಸಂದರ್ಭದಲ್ಲಿ 'ಬೆಳೆ ಕುಯ್ಯಲು' ಇವರನ್ನು ಕರೆ ಎಂದನು.
   ಅ) ಬಂಧು-ಬಳಗವನ್ನು ಆ) ನೆರೆ ಹೊರೆಯವರು ಇ) ಕೂಲಿ ಕೆಲಸದವರು ಈ) ಮಕ್ಕಳನ್ನು

3. ರೈತನು ಮಗನಿಗೆ 'ನಾಳೆ ಬೆಳಿಗ್ಗೆ ನಾವಿಬ್ಬರೂ ಕುಯ್ಯೋಣ' ಎಂದು ಹೇಳಲು ಕಾರಣ.
   ಅ) ಬೇರೆಯವರನ್ನು ನಂಬಿದರೆ ಕೆಲಸವಾಗದು ಆ) ಬೇರೆಯವರು ಬೇಳೆಯನ್ನು ಹಾಳು ಮಾಡುತ್ತಾರೆ
   ಇ) ಬೇರೆಯವರು ಬೆಳೆಯನ್ನು ಕದಿಯುತ್ತಾರೆ ಈ) ಕೂಲಿ ಉಳಿಯುತ್ತದೆ

4. ಗೀಜಗವು ಆಹಾರ ತರಲು ಹೋಗುವಾಗ ತನ್ನ ಮರಿಗಳಿಗೆ ಹೀಗೆ ಹೇಳುತ್ತಿತ್ತು.
   ಅ) ಯಾರಾದರು ಮಾತನಾಡಿಕೊಂಡರೆ ಹೇಳಿ ಆ) ಯಾರು ಬಂದರೂ ಹೇಳಬೇಡಿ
   ಇ) ಬಂದವರನ್ನು ಮಾತನಾಡಿಸಿ ಈ) ಗೂಡಿನಲ್ಲೇ ಮಲಗಿ ನಿದ್ರೆ ಮಾಡಿ

## II. ಕೆಳಗಿನ ಪ್ರಶ್ನೆಗಳಿಗೆ ಯೋಚಿಸಿ ಉತ್ತರಿಸು.

1. ರೈತ ಅಥವಾ ಗೀಜಗನ ಜಾಗದಲ್ಲಿ ನೀನಿದ್ದರೆ ಏನು ಮಾಡುತ್ತಿದ್ದೆ?

________________________________________
________________________________________
________________________________________
________________________________________
________________________________________
________________________________________

2. ಈ ಕಥೆಯಲ್ಲಿ ನಿನಗಿಷ್ಟವಾದ ಪಾತ್ರ ಅಥವಾ ಸನ್ನಿವೇಶವನ್ನು ಕುರಿತು ಬರೆ.

________________________________________
________________________________________
________________________________________
________________________________________
________________________________________
________________________________________
________________________________________

@KTBS NOT TO BE REPUBLISHED

ಸೇ.ಬಂ

# 19. ಮೊದಲು ಕೆಲಸ ಮಾಡುವೆ

ಸಾ

✦ ಓದಿ ತಿಳಿಯೋಣ. ಪ್ರಶ್ನೆಗಳಿಗೆ ಉತ್ತರಿಸೋಣ.



**ಮಗು:** ಇರುವೆ ಇರುವೆ ಕರಿಯ ಇರುವೆ ನಾನು ಜೊತೆಗೆ ಬರುವೆ
ಆಡಲಿಕ್ಕೆ ಅಮ್ಮನಿಂದ ಕರಣಿ ಬೆಲ್ಲ ತರುವೆ
**ಇರುವೆ:** ಮಳೆಯ ಕಾಲ ಬರುತಲಿಹುದು ನನಗೆ ಸಮಯವಿಲ್ಲ
ಅನ್ನ ಕೂಡಿ ಹಾಕಿ ಇಟ್ಟು ಕರೆಯ ಬರುವೆನಲ್ಲ

**ಮಗು:** ನಾಯಿಮರಿ ನಾಯಿಮರಿ ನಿನ್ನ ಜೊತೆಗೆ ಹಾಡುವೆ
ಕುಂಯ್ ಕುಂಯ್ ರಾಗ ಕಲಿಸು ನಿನ್ನ ಹಾಗೆ ಹಾಡುವೆ
**ನಾಯಿ:** ಆಡಲಿಕ್ಕೆ ಹಾಡಲಿಕ್ಕೆ ನನಗೆ ಸಮಯವಿಲ್ಲ
ಅನ್ನ ಹಾಕಿದವನ ಮನೆಯ ಕಾಯುತ್ತಿರುವೆನಲ್ಲ





**ಮಗು:** ಜೇನು ಹುಳುವೆ ಜೇನು ಹುಳುವೆ ಎಲ್ಲಿ ಹೋಗುತ್ತಿರುವೆ
ಕರೆದುಕೊಂಡು ಹೋಗು ನನ್ನ ನಿನ್ನ ಜೊತೆಗೆ ಬರುವೆ
**ಜೇನು:** ಬನವ ಸುತ್ತಿ ಸುಳಿದು ನಾನು ಜೇನನರಸಿ ತರುವೆ
ಈಗ ಬೇಡ ಚೈತ್ರ ಬರಲಿ ಆಗ ನಾನು ಕರೆವೆ

**ಮಗು:** ಕುಹೂ ಕುಹೂ ಕೂಗುತ್ತಿರುವ ಮಧುರ ಕಂಠ ಕೋಗಿಲೆ
ಎಲೆಯ ಬಲೆಯ ನೆಲೆಯೊಳಿರಲು ನಾನು ಜೊತೆಗೆ ಬರುವೆ
**ಕೋಗಿಲೆ:** ಕಾಕ ದೃಷ್ಟಿ ತಪ್ಪಿಸಲಿಕ್ಕೆ ಹಂಚಿನಲ್ಲಿ ಇರುವೆ
ಚೈತ್ರ ಕಳೆಯೆ ಒಂಟಿ ಇರುವೆ ಆಗ ಕರೆಯ ಬರುವೆ





ಯಾರು ಇವರು ನನ್ನ ಕೂಡ ಆಡಲಿಕ್ಕೆ ಒಲ್ಲರು
ತಮ್ಮ ತಮ್ಮ ಕೆಲಸದಲ್ಲಿ ವೇಳೆ ಕಳೆವರೆಲ್ಲರು ಅವರ ಹಾಗೆ
ಮೊದಲು ನನ್ನ ಕೆಲಸ ನಾನು ಮಾಡುವೆ
ಓದು ಬರೆಹ ಮುಗಿಸಿಕೊಂಡು ಸಮಯ ಉಳಿಯೆ ಹಾಡುವೆ

– ಸಿಸು ಸಂಗಮೇಶ

@KTBS NOT TO BE REPUBLISHED

✦ **ಈ ಪ್ರಶ್ನೆಗಳಿಗೆ ಉತ್ತರಿಸು.**

1. ಮಗು ಅಮ್ಮನಿಂದ ಏನನ್ನು ತರುವೆನೆಂದು ಇರುವೆಗೆ ಹೇಳಿತು?

2. ನಾಯಿಯು ಆಟವಾಡಲು ಬರುವುದಿಲ್ಲ ಎಂದು ಹೇಳಲು ಕಾರಣವೇನು?

3. ಇರುವೆ ಆಟಕ್ಕೆ ಬರುವಂತೆ ಮಾಡಲು ಏನು ಮಾಡುವೆ?

4. ಮಗು ಕೊನೆಯಲ್ಲಿ ತೆಗೆದುಕೊಂಡ ತೀರ್ಮಾನವೇನು? ಏಕೆ?

@KTBS
NOT TO BE REPUBLISHED

5. ಪದ್ಯದಲ್ಲಿರುವ ಹೆಸರು ಸೂಚಿಸುವ ಪದಗಳನ್ನು ಗುರುತಿಸಿ ಬರೆ.

6. ಪದ್ಯದಲ್ಲಿರುವ ಕೆಲಸ ಸೂಚಿಸುವ ಪದಗಳನ್ನು ಗುರುತಿಸಿ ಬರೆ.

ಸೇ.ಬಂ

# 20. ಒಗಟಿನ ಆಟ

ಸಾ

✦ ಬುಟ್ಟಿಯಲ್ಲಿನ ಅಕ್ಷರ ಬಳಸಿ ಒಗಟುಗಳಿಗೆ ಉತ್ತರ ಹುಡುಕೋಣ.

| ಕ್ರ.ಸಂ | ಒಗಟು | ಉತ್ತರ |
|---|---|---|
| 1 | ಮಳೆ ಬಂದರೆ ಅರಳುವೆ,<br>ಇಲ್ಲದಿದ್ದರೆ ಮುದುರಿ ಕೊಳ್ಳುವೆ. | |
| 2 | ಪ್ರತಿದಿನ ನೋಡುವರು,<br>ವರ್ಷದ ಕೊನೆಯಲ್ಲಿ ಮುದುರಿ ಬಿಸಾಡುವರು. | |
| 3 | ಕಪ್ಪುಂಟು ಕಸ್ತೂರಿಯಲ್ಲ, ಬಿಳುಪುಂಟು ಸುಣ್ಣವಲ್ಲ,<br>ನೀರುಂಟು ಬಾವಿಯಲ್ಲ, ರೆಕ್ಕೆಯುಂಟು ಪಕ್ಷಿಯಲ್ಲ. | |
| 4 | ನೀರಲ್ಲೆ ಹುಟ್ಟುತ್ತೆ! ನೀರಲ್ಲೆ ಬೆಳೆಯುತ್ತೆ! ನೀರು<br>ಕಂಡ ಕೂಡಲೇ ಕರಗಿ ಹೋಗುತ್ತೆ. | |




©KTBS NOT TO BE REPUBLISHED

✦ ಹಿರಿಯರಿಂದ ಸಂಗ್ರಹಿಸಿದ ಒಗಟುಗಳನ್ನು ಬರೆಯೋಣ.

| ಕ್ರ.ಸಂ | ಒಗಟು | ಉತ್ತರ |
|---|---|---|
| 1 | | |
| 2 | | |

ಸೇ.ಬಂ

# 21. ಪ್ರಾಸಪದ

ಸಾ

✦ ಒಂದೇ ರೀತಿಯ ಧ್ವನಿಗಳಿಂದ ಪೂರ್ಣಗೊಳ್ಳುವ ಪದಗಳನ್ನು ನೀಡಿರುವ ಚಿತ್ರದೊಳಗೆ ಬರೆಯೋಣ.

ಚಿಟ್ಟೆ ಚಿಟ್ಟೆ
ಚಂದದ ಚಿಟ್ಟೆ
ಕೊಟ್ಟವರ್‍ಯಾರೆ
ಬಣ್ಣದ ಬಟ್ಟೆ





ಸುಗ್ಗಿಯಲ್ಲಿ ಜಗ್ಗಿ ಕಾಳು
ತುಂಬಿ ಬಂತು ಹೊಲದಲಿ
ಹಿಗ್ಗಿನಲ್ಲಿ ಅವರ ಬಾಳು
ಹರುಷ ತಂತು ಮನೆಯಲಿ

✦ ಇಲ್ಲಿ ಕೊಟ್ಟಿರುವ ಪದಗಳಲ್ಲಿ ಪ್ರಾಸ ಪದಗಳನ್ನು (ಒಂದೇ ರೀತಿಯ ಧ್ವನಿಯಿಂದ ಕೊನೆಗೊಳ್ಳುವ) ಜೋಡಿಸಿ ಬರೆಯೋಣ.

| | | | |
|---|---|---|---|
| ಹಣ್ಣು | ಪ್ರವಾಸ | ಹಾರಾಟ | ಬೊಟ್ಟು |
| ಕೊಟ್ಟು | ವಿಮಾನ | ಮಾರಾಟ | ಆಹಾರ |
| ಸಮಾನ | ವಿಹಾರ | ಪ್ರಯಾಸ | ಗಿಣ್ಣು |

| | |
|---|---|
| | |
| | |
| | |

| | |
|---|---|
| | |
| | |
| | |

NOT TO BE REPUBLISHED @KTBS

ಸೇ.ಬಂ

# 22. ಆರೋಗ್ಯವೇ ಭಾಗ್ಯ

ಸಾ

✦ **ಸಂಭಾಷಣೆಯನ್ನು ಓದಿ ಸುಳಿವು ಲೇಖನ ಚಿಹ್ನೆಗಳನ್ನು ಬಳಸಿ ಸೂಕ್ತ ಲೇಖನ ಚಿಹ್ನೆ ಹಾಕೋಣ.**

**ಡಾಕ್ಟರ್ :** ನಿನ್ನ ಹೆಸರೇನು ಪುಟ್ಟಿ

**ಕಾವ್ಯ :** ಕಾವ್ಯ

**ಡಾಕ್ಟರ್ :** ಏನು ತೊಂದರೆ ಕಾವ್ಯ

**ಕಾವ್ಯ :** ನೆನ್ನೆಯಿಂದ ಹೊಟ್ಟೆ ನೋಯುತ್ತಿದೆ ಶಾಲೆಗೂ ಹೋಗಿಲ್ಲ

**ಡಾಕ್ಟರ್ :** ಹೌದಾ ಅದಕ್ಕೆ ಯಾಕೆ ಚಿಂತೆ ಹೋ ಇದು ಯಾರು ನಿನ್ನ ಅಮ್ಮನಾ

**ಕಾವ್ಯ :** ಹೌದು ಡಾಕ್ಟರ್

**ಡಾಕ್ಟರ್ :** ಸರಿ ನಿನ್ನೆ ಏನನ್ನು ತಿಂದಿದ್ದೆ ಹೇಳ್ತೀಯಾ

**ಕಾವ್ಯ :** ನೆನ್ನೆ ಬೆಳಗ್ಗೆ ಇಡ್ಲಿ ಚಟ್ನಿ ಮಧ್ಯಾಹ್ನ ಮೊಸರನ್ನ ಮತ್ತೆ ರಾತ್ರಿ ಅನ್ನ ಸಾಂಬಾರ್ ಊಟ ಮಾಡಿದ್ದೆ ಸರ್

**ಡಾಕ್ಟರ್ :** ಆಯ್ತು ನಿಮ್ಮನೆಗೆ ಕುಡಿಯುವ ನೀರನ್ನು ಎಲ್ಲಿಂದ ತರುತ್ತೀರಿ

**ಕಾವ್ಯ :** ಕೆರೆಯಿಂದ ತರುತ್ತೇವೆ

**ಡಾಕ್ಟರ್ :** ಹೌದಾ ಕೆರೆ ನೀರು ಮಲಿನವಾಗಿರುತ್ತದೆ ಅದು ಹಲವು ರೋಗಗಳಿಗೆ ಕಾರಣವಾಗುತ್ತದೆ ಆದ್ದರಿಂದ ನೀರನ್ನು ಕಾಯಿಸಿ ಆರಿಸಿ ಕುಡಿಯುವ ಅಭ್ಯಾಸ ಮಾಡಿಕೊಳ್ಳಿ

,      .      ?

NOT TO BE REPUBLISHED @KTBS

ಸೇ.ಬಂ

# 23. ಸಾಮ್ಯತೆ

ಸಾ

✦ ಚಿತ್ರವನ್ನು ಗಮನಿಸಿ, ಸಾಮ್ಯತೆಗಳನ್ನು ಪಟ್ಟಿ ಮಾಡೋಣ.





ಎರಡೂ ಚಿತ್ರಗಳಲ್ಲಿ ಸಾಮಾನ್ಯವಾಗಿ ಇರುವ ಅಂಶಗಳು:

@KTBS NOT TO BE REPUBLISHED

ಸೇ.ಬಂ

# 24. ವ್ಯತ್ಯಾಸ

ಸಾ

✦ ಚಿತ್ರಗಳನ್ನು ಗಮನಿಸಿ, ವ್ಯತ್ಯಾಸಗಳನ್ನು ಪಟ್ಟಿ ಮಾಡೋಣ.



©KTBS NOT TO BE REPUBLISHED

| ಚಿತ್ರ–1 | ಚಿತ್ರ–2 |
| --- | --- |
| | |
| | |
| | |
| | |
| | |
| | |
| | |

ಸೇ.ಬಂ

# 25. ಸರಣಿ ಚಿತ್ರ ಸನ್ನಿವೇಶ

ಸಾ

✦ ಚಿತ್ರ ಸರಣಿಯ ಸನ್ನಿವೇಶವನ್ನು ಕುರಿತು ಮಾತನಾಡೋಣ.



✦ ಮೇಲಿನ ಚಿತ್ರ ಸನ್ನಿವೇಶ ಕುರಿತು ಬರೆಯೋಣ.

© KTBS NOT TO BE REPUBLISHED

ಸೇ.ಬಂ

# 26. ಮುಂದೇನು?

ಸಾ

✦ ಓದೋಣ ಮುಂದಿನದನ್ನು ಊಹಿಸಿ ಬರೆಯೋಣ.



ಪುಟ್ಟಿಗೆ ಪ್ರಾಣಿ, ಪಕ್ಷಿಗಳೆಂದರೆ ಬಹಳ ಇಷ್ಟ. ಅವಳು ತಾನು ತಿನ್ನುವ ಊಟದಲ್ಲಿ ಸ್ವಲ್ಪವನ್ನಾದರೂ ಪ್ರಾಣಿ ಪಕ್ಷಿಗಳಿಗೆ ಕೊಟ್ಟು ಖುಷಿ ಪಡುತ್ತಿದ್ದಳು.

ಅಂದು ತನ್ನ ತಮ್ಮ ಪುಟ್ಟನ ಜೊತೆ ರೊಟ್ಟಿ ತಿನ್ನುವಾಗ ಕಾಗೆ ಹಾರಾಡುವುದನ್ನು ಗಮನಿಸಿದಳು. ಖುಷಿಯಿಂದ ಅದಕ್ಕೆ ಒಂದು ರೊಟ್ಟಿಯನ್ನು ನೀಡಿದಳು.

ಪುಟ್ಟಿ ನೀಡಿದ ರೊಟ್ಟಿಯನ್ನು ಪಡೆದ ಕಾಗೆಯು ಒಂದು ಕೊಂಬೆಯ ಮೇಲೆ ಕುಳಿತು, ಅದನ್ನು ಕಾಲಿನಿಂದ ಹಿಡಿದು ಕಾ.. ಕಾ.. ಕಾ.. ಎಂದು ಒಂದೇ ಸಮನೆ ಕಿರುಚಲಾರಂಬಿಸಿತು. ಪುಟ್ಟ ಅದನ್ನು ಓಡಿಸಲು ಪ್ರಯತ್ನಿಸಿದ. ಆದರೆ ಅದು ಹೋಗಲಿಲ್ಲ. ಬದಲಿಗೆ ಮತ್ತಷ್ಟು ಜೋರಾಗಿ ಕೂಗಲು ಪ್ರಾರಂಭಿಸಿತು.





ನೋಡನೋಡುತ್ತಲೇ ಬಹಳಷ್ಟು ಕಾಗೆಗಳು ಅಲ್ಲಿಗೆ ಬಂದವು. ಅವುಗಳನ್ನು ನೋಡಿ ಪುಟ್ಟ ಹೆದರಿ ಅಲ್ಲಿಂದ ಓಡಿಹೋದ. ಪುಟ್ಟಿ ತನ್ನ ಚಿಂಟು ಮೊಲದ ಜೊತೆ ಕುಳಿತು ನೋಡ ತೊಡಗಿದಳು.



© KTBS NOT TO BE REPUBLISHED

ಸೇ.ಬಂ

# 27. ಚಿತ್ರಕ್ಕೊಂದು ಕಥೆ

ಸಾ

✦ ಚಿತ್ರ ಗಮನಿಸಿ ಕಥೆ ಹೇಳೋಣ ಮತ್ತು ಚಿಕ್ಕದಾಗಿ ಕಥೆ ಬರೆಯೋಣ.



© KTBS NOT TO BE REPUBLISHED

# ೧. ಕಾಡಿಗೊಂದು ಟಿ.ವಿ ತರೋಣ

**ಪ್ರವೇಶ:** ಮಕ್ಕಳೇ, ಎಲ್ಲರೂ ಚೆನ್ನಾಗಿದ್ದೀರಾ? ಎಲ್ಲರೂ ಸೇರಿ ಒಂದು ಚಪ್ಪಾಳೆ ತಟ್ಟೋಣ. ಎಲ್ಲರನ್ನೂ ಸ್ವಾಗತಿಸೋಣ, ಆದರೆ ಸ್ವಾಗತಿಸುವಾಗ ನಮ್ಮ ನಮ್ಮ ಮನೆ ಭಾಷೆಯಲ್ಲೇ ಹೇಳೋಣ....

1. ಮಕ್ಕಳೇ ನಿಮಗೆ ಸ್ವಾಗತ (ಕನ್ನಡ)
2. ಬಚ್ಚೋಂವ್ ಆಪ್ ಸಬ್ಕಾ ಸ್ವಾಗತ್ ಹೇ(ಹಿಂದಿ)
3. Welcome children (ಇಂಗ್ಲೀಷ್)
4. ಮೀಕಿ ಅಂದರಿಕಿ ಸ್ವಾಗತಮು (ತೆಲುಗು)
5. ಉಂಗಳುಕು ಎಲ್ಲಾರುಕುಮ್ ಸ್ವಾಗತಂ (ತಮಿಳು)
6. ಕುಟ್ಟಿಗಳೇ ನಿಙಳಕ್ ಸ್ವಾಗದಂ (ಮಲಯಾಳಂ)
7. ಬಚ್ಚೋ ಆಪ್ ಕಾ ಇಸ್ತೇ ಕಬಾಲ್ ಹೈ (ಉರ್ದು)
8. ಮುಲಾಂನೊ ತುಮಚ್ ಸ್ವಾಗತ ಆಹೆ (ಮರಾಠಿ)
9. ಬೆಟ್ ಬೆಟಾ ತಮುನ್ ಸೇಜಿನ್ ಸ್ವಾಗತ್ (ಲಂಬಾಣಿ)
10. ಜೋಕುಲೇ ನಿಕ್‌ಲೇಗ್ ಸ್ವಾಗತ (ತುಳು)

@KTBS NOT TO BE REPUBLISHED

**(ಆತ್ಮೀಯ ಗೆಳೆಯರಾಗಿದ್ದ ಆನೆ, ಕರಡಿ, ಜಿಂಕೆ ಮತ್ತು ಮೊಲ ಪ್ರತಿದಿನ ಕಾಡಿನಲ್ಲಿ ನಡೆದಾಡುವ ಹವ್ಯಾಸ ಬೆಳೆಸಿಕೊಂಡಿದ್ದರು. ಹೀಗೆ ಒಂದು ದಿನ ಒಟ್ಟಿಗೆ ಸೇರಿದಾಗ...)**

**ಜಿಂಕೆ:** ಮೊಲ ಎಲ್ಲೋ ಆಟ ಆಡಲು ಹೋಗಿತ್ತೇನೋ?

**ಕರಡಿ:** ಇಲ್ಲಾ, ಅದು ಬೇರೆ ಏನೋ ಕೆಲಸದಲ್ಲಿ ಇತ್ತು ಅನಿಸುತ್ತೆ?

**ಎಲ್ಲವೂ:** ನೀನೇ ಹೇಳಿ ಬಿಡು ಮೊಲ. ಯಾಕೆ ತಡವಾಗಿ ಬಂದೆ ಅಂತ.

**ಮೊಲ:** ಹೇಳ್ತಿನಿ ಕೇಳಿ, ನನಗೆ ಬಹಳ ದಿನಗಳ ಹಿಂದೆ ಒಂದು ಆಲೋಚನೆ ಬಂದಿತ್ತು.

ಅದು ಇವತ್ತು ಬೆಳಿಗ್ಗೆಯಿಂದ ತುಂಬಾ ಕಾಡುತ್ತಿತ್ತು. ಅದೇನೆಂದರೆ... ಮನುಷ್ಯನಿಗೆ ನಮ್ಮ ವಿಷಯಗಳು ತಿಳಿಯುತ್ತದೆ. ಆದರೆ ನಮಗೆಲ್ಲಾ ನಾಡಿನಲ್ಲಿ ಏನೇನಾಗುತ್ತೆ ಎಂಬ ವಿಷಯವೇ ತಿಳಿಯುವುದಿಲ್ಲ. ಆದ್ದರಿಂದ ನಾವೆಲ್ಲಾ ಇನ್ನೂ ಹಿಂದೆ ಇದ್ದೇವೆ ಅನ್ನಿಸುತ್ತಿದೆ. ನಮಗೂ ಎಲ್ಲಾ ವಿಷಯಗಳು ತಿಳಿಯುವ ಹಾಗಿದ್ದರೆ ಎಷ್ಟು ಚಂದ ಇರುತ್ತಿತ್ತು ಅಲ್ವಾ?

**ಆನೆ:** ನೀನು ಹೇಳುವ ಮಾತು ನಿಜಾನೇ..

**ಜಿಂಕೆ:** ನಾನು ಈಗಲೇ ನಾಡಿಗೆ ಹೋಗಿ ಅಲ್ಲಿ ದಿನನಿತ್ಯ ನಡೆಯೋ ವಿಷಯಗಳನ್ನು ತಿಳಿದು ಬರಲೇ?

**ಮೊಲ:** ಅಯ್ಯೋ! ನಾವು ಅಲ್ಲಿಗೆ ಹೋಗಿ ತರೋದಲ್ಲ. ನಮ್ಮ ಬಳಿಯೇ ವಿಷಯ ಬರಬೇಕು...

**ಉಳಿದ ಪ್ರಾಣಿಗಳು:** ಅದು ಹೇಗೆ ಸಾಧ್ಯ?

**ಕರಡಿ:** ಬಹಳ ಹಿಂದೆ ನಾವು ನಾಡಿಗೆ ಪ್ರವಾಸಕ್ಕೆ ಹೋಗಿದ್ದೆವು. ಅಲ್ಲಿ ಆ ಮನುಷ್ಯ ಕೆಲವೆಡೆ ಅದೇನೋ ಒಂದು ಪೆಟ್ಟಿಗೆಯನ್ನು ಕಿವಿಗೆ ಹಿಡಿದುಕೊಂಡು ಏನೇನೋ ಕೇಳಿಸಿಕೊಳ್ಳುತ್ತಿದ್ದ. ಪೆಟ್ಟಿಗೆಯೊಳಗಿಂದ ಯಾರೋ ಮಾತನಾಡುತ್ತಿದ್ದರು.

> **ಹವ್ಯಾಸ:** ಅಭಿರುಚಿ, ಅಭ್ಯಾಸ ಎಂಬ ಅರ್ಥಗಳು ಬರುತ್ತವೆ.
> 1. ಚಿಂಟುವಿಗೆ ಚಿತ್ರ ಬಿಡಿಸುವ **ಹವ್ಯಾಸ** ಇದೆ.
> 2. ನನಗೆ ಒಗಟುಗಳನ್ನು ಸಂಗ್ರಹಿಸುವ **ಹವ್ಯಾಸ** ಇದೆ.

> **ಹೊಸ ಪದಗಳ ಅರ್ಥವನ್ನು ಈ ರೀತಿ ಅಭ್ಯಾಸ ಮಾಡೋಣ.**

**ಪದ– ಪದಗಳ ಅರ್ಥ**

**ಆಲೋಚನೆ:** ಚಿಂತನೆ, ಯೋಚನೆ.

**ಕಾಡು:** ಅಡವಿ, ಅರಣ್ಯ, ವನ, ಚಿಂತೆ, ಪೀಡಿಸು, ಹಿಂಸಿಸು.

**ಎಲ್ಲವೂ:** ಹೌದಾ...!

**ಕರಡಿ:** ನಾವು ಅದೇನು ಅಂತ ವಿಚಾರಿಸಿದಾಗ, ಇದು ಪೆಟ್ಟಿಗೆಯಲ್ಲ ರೇಡಿಯೋ ಅಂತ ಹೇಳಿದರು. ಈ ಪ್ರಾಣಿಗಳು ರೇಡಿಯೋ ನೋಡಿ ಹೀಗೆ ಆಶ್ಚರ್ಯಪಡ್ತಾವಲ್ಲ... ಇನ್ನು ಟಿ.ವಿ ನೋಡಿದ್ರೆ? ಅಷ್ಟೇ...! ಅಂತಿದ್ರು...

**ಎಲ್ಲವೂ:** ರೇಡಿಯೋ..? ಟಿ.ವಿ...? ಏನಿದೆಲ್ಲಾ...?

**ಕರಡಿ:** ರೇಡಿಯೋ ಮತ್ತು ಟಿ.ವಿ ಸಮೂಹ ಮಾಧ್ಯಮದ ಸಾಧನಗಳು. ರೇಡಿಯೋದಲ್ಲಿ ಎಲ್ಲೋ ದೂರ ಮಾತನಾಡುವ ಧ್ವನಿ ಕೇಳಿಸಿದರೆ, ಟಿ.ವಿ.ಯಲ್ಲಿ ಮಾತನಾಡುವವರ ಧ್ವನಿಯ ಜೊತೆಗೆ ಅವರನ್ನೂ ನೋಡಬಹುದಂತೆ.

**ಜಿಂಕೆ:** ಅಬ್ಬಬ್ಬಾ! ಕೇಳೋಕೆ ಹೀಗಿದೆಯಲ್ಲಾ...!

**ಮೊಲ:** ನನಗೂ ಅದೇ ಆಶ್ಚರ್ಯ. ಮೊನ್ನೆ ಆಟ ಆಡ್ತಾ ಆಡ್ತಾ ತಪ್ಪಿಸಿಕೊಂಡು ಪಕ್ಕದ ಊರಿಗೆ ಹೋಗಿದ್ದೆ. ಅಲ್ಲಿ ತುಂಬಾ ಮಕ್ಕಳು ಆಡುತ್ತಿದ್ದರು. ನಾನು ಪೊದೆಯ ಬಳಿ ಕುಳಿತು ನೋಡ್ತಾ ಇದ್ದೆ.

**ಎಲ್ಲವೂ:** ಆಮೇಲೆ...?

**ಮೊಲ:** ಮಕ್ಕಳೆಲ್ಲ ಮಾತಾಡ್ತಿದ್ರು, ಟಿ.ವಿ.ಯಲ್ಲಿ ಒಳ್ಳೊಳ್ಳೆಯ ಕಾರ್ಯಕ್ರಮಗಳು ಬರುತ್ತವೆ. ಆಟ, ಸಂಗೀತ, ವಾರ್ತೆ, ಸ್ಥಳ ಪುರಾಣ, ನಾಟಕ, ಕಲೆ, ಚಲನಚಿತ್ರ, ಅಷ್ಟೇ ಯಾಕೆ ಮಕ್ಕಳ ಪಾಠವೂ ಬರುತ್ತದೆ ಅಂತ...

**ಆನೆ:** ಹೌದಾ...! ಅದೇನೋ ಸರಿ, ಆದರೆ ಈಗ ನಾವು ಏನು ಮಾಡೋಣ ಅಂತಿಯಾ?

**ಮೊಲ:** ನಾವೆಲ್ಲ ಒಟ್ಟಾಗಿ ಮೃಗರಾಜನಾದ ಸಿಂಹದ ಬಳಿಗೆ ಹೋಗಿ, ನಮ್ಮ ಕಾಡಿಗೂ ಒಂದು ಟಿ.ವಿ.ಯನ್ನು ತರುವಂತೆ ಕೇಳೋಣ. ಆಗ ಎಲ್ಲಾ ಪ್ರಾಣಿಗಳೂ ಒಟ್ಟಾಗಿ ಟಿ.ವಿ ನೋಡುತ್ತಾ, ಮನರಂಜನೆ ಪಡೆಯುತ್ತಾ, ಸಂತೋಷದಿಂದ ಬದುಕಬಹುದು.

(ಎಲ್ಲ ಪ್ರಾಣಿಗಳು ಒಟ್ಟಾಗಿ ಕಾಡಿನ ರಾಜನ ಬಳಿಗೆ ಬಂದವು)

**ಸಿಂಹ:** ಏನು ಗಜರಾಯ? ಎಲ್ಲರೂ ಒಟ್ಟಾಗಿ ಬಂದಿದ್ದೀರಿ?

(ಎಲ್ಲವೂ ಒಟ್ಟಾಗಿ ಕಾಡಿನಲ್ಲಿ ನಡೆದ ಘಟನೆಗಳನ್ನು ವಿವರಿಸಿದವು)

**ಆನೆ:** ಮೃಗರಾಜ ಅದೂ... ಅದೂ.... ನಮ್ಮ ಕಾಡಿಗೆ ಒಂದು ದೊಡ್ಡ ಟಿ.ವಿ.ಯನ್ನು ತರೋಣ. ಅದರಲ್ಲಿ ಆಟ, ಪಾಠ, ಸಂಗೀತ, ಕಲೆ, ನಾಟಕ, ಚಲನಚಿತ್ರ ಅಷ್ಟೇ ಅಲ್ಲ ದಿನನಿತ್ಯದ ವಾರ್ತೆಯೂ ಬರುತ್ತದೆ.

**ಎಲ್ಲವೂ:** ಮನುಷ್ಯರು ನಮ್ಮ ಬಗ್ಗೆ ತಿಳಿಯುವ ಹಾಗೆ ನಾವೂ ಅವರ ಬಗ್ಗೆ ತಿಳಿದು ಸುರಕ್ಷಿತವಾಗಿ ಬದುಕಬಹುದಲ್ಲವೇ ಮೃಗರಾಜ?

**ಸಿಂಹ:** ಆಗಲಿ...

**ಎಲ್ಲಾ ಪ್ರಾಣಿಗಳು:** ಹೋ....! ಹೋ.....!

**ಸಿಂಹ:** ನಾಡಿನಿಂದ ಟಿ.ವಿ.ಯನ್ನು ತರಲು ಆನೆ, ಕರಡಿ, ಚಿರತೆ ಜೊತೆಗೆ ನಾನೂ ಬರುತ್ತೇನೆ. ಒಂದೊಳ್ಳೆಯ ದೊಡ್ಡ ಟಿ.ವಿ.ಯನ್ನು ತರೋಣ. ನಾಳೆಯಿಂದ ಕಾಡಿನ ಎಲ್ಲಾ ಪ್ರಾಣಿಗಳಿಗೂ ಮನರಂಜನೆಯ ಹಬ್ಬವೋ ಹಬ್ಬ! ಆದರೆ ಒಂದು ಷರತ್ತು. ಎಲ್ಲರೂ ನಮಗೆ ಅವಶ್ಯಕ ಮತ್ತು ಉತ್ತಮವಾದ ಕಾರ್ಯಕ್ರಮಗಳನ್ನು ಮಾತ್ರ ನೋಡೋಣ.

**ಎಲ್ಲಾ ಪ್ರಾಣಿಗಳು:** ಮೃಗರಾಜನಿಗೆ ಜಯವಾಗಲಿ.... ಮೃಗರಾಜನಿಗೆ ಜಯವಾಗಲಿ....

**ಪದ-ಪದಗಳ ಅರ್ಥ**

**ಮನರಂಜನೆ:** ಸಂತೋಷ, ಖುಷಿ.
**ವಾರ್ತೆ:** ಸುದ್ದಿ, ವಿಷಯ.
**ಸಮೂಹ:** ಗುಂಪು

@KTBS NOT TO BE REPUBLISHED

## ೧. ವಾಕ್ಯಗಳನ್ನು ರಚಿಸೋಣ.

* **ಆಲೋಚನೆ:** ೧. ಒಳ್ಳೆಯ ಆಲೋಚನೆಗಳು ಉತ್ತಮ ಮಾನಸಿಕ ಆರೋಗ್ಯವನ್ನು ನೀಡುತ್ತವೆ.
  ೨. ನಾವು ಸದಾ ಆಲೋಚಿಸಿ ಕೆಲಸ ಮಾಡಬೇಕು.
  ೩. ಏನಾದರೂ ನಿರ್ಧಾರ ಮಾಡುವ ಮೊದಲು ಚೆನ್ನಾಗಿ ಆಲೋಚಿಸಬೇಕು.
* **ಕಾಡು:** ೧. ನಮ್ಮ ಊರಿನಲ್ಲಿ ಒಂದು ದೊಡ್ಡ ಕಾಡು ಇದೆ.
  ೨. ಕಾಡು ಇದ್ದರೆ ಮಳೆ, ಮಳೆ ಇದ್ದರೆ ಬೆಳೆ.
  ೩. ______________________
* **ಮನರಂಜನೆ** : ______________________
* **ಸಮೂಹ** : ______________________
* **ವಾರ್ತೆ** : ______________________

## ೨. ಕಥೆಯಲ್ಲಿ ಬಂದಿರುವ ಹೆಸರು ಸೂಚಿಸುವ ಪದಗಳು :

| |
|---|
| ಆನೆ, ಝೀಬ್ರಾ, ಜಿಂಕೆ, ಮೊಲ, ಮನುಷ್ಯ, ಕಾಡು, ಸಿಂಹ, ರೇಡಿಯೋ, ದೂರದರ್ಶನ |

ನೀನು ಗಮನಿಸಿದ ಇತರ ಹೆಸರು ಸೂಚಿಸುವ ಪದಗಳು:

______________________

______________________

## ೩. ಕಥೆಯಲ್ಲಿ ಬಂದಿರುವ ಕೆಲಸವನ್ನು ಸೂಚಿಸುವ ಪದಗಳು :

| |
|---|
| ಬಂದೆ, ಆಡಲಿಕ್ಕೆ, ಬಂದಿತ್ತು, ಕುಳಿತುಕೊಂಡಿದ್ದೆ, ನೋಡೋಣ, ಕೇಳಿಸಿಕೊಳ್ಳುತ್ತಿದ್ದ, ಮಾತನಾಡುತ್ತಿದ್ದರು. |

ನೀನು ಗಮನಿಸಿದ ಇತರ ಕೆಲಸವನ್ನು ಸೂಚಿಸುವ ಪದಗಳು:

______________________

______________________

@KTBS NOT TO BE REPUBLISHED

## ೪. ಸನ್ನಿವೇಶಗಳನ್ನು ನೋಡಿ ಮಾತನಾಡೋಣ ಮತ್ತು ಬರೆಯೋಣ.



___

___



___

___

| | |
|---|---|
| * ನನಗೆ ಅರ್ಥವಾಗಿದೆ | ☐ |
| * ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

## ೫. ಈ ಸನ್ನಿವೇಶವನ್ನು ಓದಿ, ಅದರ ಬಗ್ಗೆ ನಮ್ಮದೇ ಭಾಷೆಯಲ್ಲಿ ಗೆಳೆಯರೊಂದಿಗೆ ಮಾತನಾಡೋಣ. ನೀಡಿದ ಪ್ರಶ್ನೆಗಳಿಗೆ ಉತ್ತರಿಸೋಣ.



ಮೀನು ಹಿಡಿಯಲು ಸೋಮು ನದಿ ತೀರದಲ್ಲಿ ಕಡಲೆಪುರಿ ಎಸೆಯುತ್ತಾ ಕುಳಿತಿದ್ದನು. ಗುಂಪು ಗುಂಪಾಗಿ ಮೀನುಗಳು ಚೆಲ್ಲಾಟವಾಡುತ್ತಾ ಕಡಲೆಪುರಿಯನ್ನು (ಮಂಡಕ್ಕಿ) ತಿಂದು ಹಿಂತಿರುಗುತ್ತಿದ್ದವು. ಆದರೆ ಅವನ ಕೈಗೆ ಸಿಗುತ್ತಲೇ ಇರಲಿಲ್ಲ. ಇದಕ್ಕೆ ಏನಾದರೂ ಉಪಾಯ ಮಾಡಬೇಕೆಂದು ಸೋಮು ಯೋಚಿಸುತ್ತಾ ಮನೆಗೆ ಹಿಂದಿರುಗಿದನು.

**ಅಮ್ಮ:** ಯಾಕೆ ಸೋಮು ಏನಾಯಿತು? ನಿನಗೆ ಇವತ್ತು ಒಂದೂ ಮೀನು ಸಿಗಲಿಲ್ಲವೇ?



**ಸೋಮು:** ಇಲ್ಲ ಅಮ್ಮ, ಎಷ್ಟೇ ಪ್ರಯತ್ನಪಟ್ಟರೂ ಅವು ಸಿಗುತ್ತಲೇ ಇಲ್ಲ.

**ಅಮ್ಮ:** ಹಾಗಾದರೆ, ಮೀನುಗಳನ್ನು ಸುಲಭವಾಗಿ ಹಿಡಿಯಬೇಕಾದರೆ ನಿನ್ನ ಕಾಲು ಚೀಲಗಳನ್ನು ತೆಗೆದುಕೊಂಡು ಹೋಗು.

ಮಾರನೇ ದಿನ ತನ್ನ ಕಾಲುಚೀಲಗಳನ್ನು ಪಕ್ಕದಲ್ಲಿರಿಸಿಕೊಂಡು ಕಡಲೆಪುರಿಯನ್ನು ನದಿಗೆ ಎಸೆಯತೊಡಗಿದನು. ಎಂದಿನಂತೆ ಮೀನುಗಳು ಒಂದೊಂದಾಗಿ ಬಂದು ಪುರಿ ತಿನ್ನಲು ಪ್ರಾರಂಭಿಸಿದವು.

**ಮೀನು:** ಹೇ..! ಎಲ್ಲರೂ ಹುಷಾರಾಗಿ ಹೋಗಿ, ಕಡಲೆಪುರಿಯನ್ನು ತಿನ್ನಿ. ಆ ಹುಡುಗ ಕಾಲುಚೀಲ ತಂದಿದ್ದಾನೆ. ಏನೋ ಉಪಾಯ ಹೂಡಿರಬೇಕು.

**ಕಪ್ಪೆ:** ನೀವೇನು ಯೋಚಿಸಬೇಡಿ, ಧೈರ್ಯವಾಗಿ ಕಡಲೆಪುರಿ ತಿನ್ನಿ. ಆ ಹುಡುಗನನ್ನು ನಾನು ನೋಡಿಕೊಳ್ಳುತ್ತೇನೆ.

**ಸೋಮು:** 'ಹ್ಹಾ!.. ಈಗ ಮೀನು ಹಿಡಿಯುತ್ತೇನೆ' ಎನ್ನುವಷ್ಟರಲ್ಲಿ ಅವನು ತಂದಿದ್ದ ಕಾಲು ಚೀಲಗಳು ಕುಪ್ಪಳಿಸುತ್ತಾ ಸೋಮುವಿನಿಂದ ತುಂಬಾ ದೂರ ಹೊರಟಿದ್ದವು.



ಭಯ ಮತ್ತು ಆಶ್ಚರ್ಯಗಳಿಂದ ಸೋಮು ಅವುಗಳನ್ನು ಹಿಂಬಾಲಿಸಿದನು. ಆದರೆ ಕಾಲುಚೀಲಗಳು ಬೇಗ ಬೇಗನೇ ಕುಪ್ಪಳಿಸುತ್ತಾ ಪೊದೆಯನ್ನು ಏರಿ ಕುಳಿತವು. ಸೋಮು, ಸದ್ದು ಮಾಡದೆ ನಿಧಾನವಾಗಿ ಪೊದೆಯ ಹಿಂಬದಿಯಲ್ಲಿ ಹೋಗಿ ಕುಳಿತನು. ಕೂಡಲೇ ಎರಡು ಕಪ್ಪೆಗಳು ಕಾಲುಚೀಲದಿಂದ ಹೊರಕ್ಕೆ ಜಿಗಿದು, ಸೋಮುವನ್ನು ನೋಡಿ ಪಕಪಕನೆ ನಕ್ಕು ನದಿಗೆ ಹಾರಿದವು.

**೧. ಮೀನುಗಳನ್ನು ಹಿಡಿಯಲು ಸೋಮು ಯಾವ ಉಪಾಯ ಮಾಡಿದ?**

______________________________

**೨. ಕಾಲು ಚೀಲಗಳನ್ನು ನೋಡಿ ಸೋಮು ಏಕೆ ಗಾಬರಿಗೊಂಡನು?**

______________________________

______________________________

©KTBS NOT TO BE REPUBLISHED

೬. ನಾವು ಭಾಗವಹಿಸಿರುವ ಹುಟ್ಟು ಹಬ್ಬದ ಆಚರಣೆ ಬಗ್ಗೆ ಮಾತನಾಡೋಣ.




ಹುಟ್ಟು ಹಬ್ಬದ ಆಚರಣೆ

@KTBS NOT TO BE REPUBLISHED

* ನಮ್ಮ ಮನೆಯಲ್ಲಿ ನಡೆಯುವ ಕಾರ್ಯಕ್ರಮಗಳ ಬಗ್ಗೆ ಗೆಳೆಯರೊಂದಿಗೆ ಮಾತನಾಡಿ, ಯಾವುದಾದರೂ ಒಂದು ಕಾರ್ಯಕ್ರಮದ ಬಗ್ಗೆ ಬರೆಯೋಣ.

## ೭. ಸುಳಿವುಗಳನ್ನು ಗಮನಿಸಿ, ನಮ್ಮ ಇಷ್ಟ–ಇಷ್ಟವಿಲ್ಲದ್ದರ ಬಗ್ಗೆ ಪಟ್ಟಿ ಮಾಡಿ, ಗೆಳೆಯರೊಂದಿಗೆ ಮಾತನಾಡೋಣ.

| ಇಷ್ಟವಾದದ್ದು | ಇಷ್ಟವಿಲ್ಲದ್ದು |
|---|---|
| | |
| | |
| | |
| | |
| | |
| | |
| | |
| | |
| | |
| | |
| | |



@KTBS NOT TO BE REPUBLISHED

**ಸುಳಿವುಗಳು:** ಆಟ ಆಡುವುದು, ಟಿ.ವಿ. ನೋಡುವುದು, ಕೆಲಸ ಮಾಡುವುದು, ಪುಸ್ತಕಗಳನ್ನು ಓದುವುದು, ಬರೆಯುವುದು, ಪುಸ್ತಕಗಳ ಹಾಳೆ ಹರಿಯುವುದು, ಚಿತ್ರ ಬಿಡಿಸುವುದು, ಹಾಡುವುದು, ಕುಣಿಯುವುದು, ತಿನ್ನುವುದು, ಈಜುವುದು, ಮಾತನಾಡುವುದು, ಮೊಬೈಲ್ ನೋಡುವುದು, ರಸ್ತೆ ಮಧ್ಯೆ ಆಡುವುದು, ಸ್ವಚ್ಛತೆಯನ್ನು ಕಾಪಾಡುವುದು, ತಡವಾಗಿ ಏಳುವುದು..........

**ವಿಶೇಷ ಸೂಚನೆ:** ಇವುಗಳ ಹೊರತಾಗಿಯೂ ನಮಗೆ ಇಷ್ಟವಿರುವ ಮತ್ತು ಇಷ್ಟವಿಲ್ಲದ ಅಂಶಗಳ ಬಗ್ಗೆ ಮಾತನಾಡೋಣ.

## ೮. ಸನ್ನಿವೇಶ ಗಮನಿಸಿ, ಮಾತನಾಡೋಣ ಮತ್ತು ಬರೆಯೋಣ.



@KTBS NOT TO BE REPUBLISHED



* ನನಗೆ ಅರ್ಥವಾಗಿದೆ
* ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :
ದಿನಾಂಕ :

**೯. ದೂರದರ್ಶನ ಮತ್ತು ರೇಡಿಯೋದಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳಲ್ಲಿ ನಮ್ಮ ಇಷ್ಟದ ಮತ್ತು ಇಷ್ಟವಾಗದ ಕಾರ್ಯಕ್ರಮಗಳ ಬಗ್ಗೆ ಮಾತೃಭಾಷೆ ಅಥವಾ ಶಾಲಾ ಭಾಷೆಯಲ್ಲಿ ಮಾತನಾಡೋಣ.**




@KTBS NOT TO BE REPUBLISHED

**ಸೂಚನೆ:** ನಾವು ನೋಡಿದ ಅಥವಾ ಕೇಳಿದ ಟಿ.ವಿ. / ರೇಡಿಯೋಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳಲ್ಲಿ ನಮ್ಮ ಇಷ್ಟ ಮತ್ತು ಇಷ್ಟವಿಲ್ಲದವುಗಳನ್ನು ಬರೆಯೋಣ.

| ಇಷ್ಟವಾದ ಕಾರ್ಯಕ್ರಮಗಳು | ಇಷ್ಟವಿಲ್ಲದ ಕಾರ್ಯಕ್ರಮಗಳು |
|---|---|
| ______________________ | ______________________ |
| ______________________ | ______________________ |
| ______________________ | ______________________ |
| ______________________ | ______________________ |
| ______________________ | ______________________ |

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

## ೧೦. ಚಿತ್ರಗಳ ಸಹಾಯದಿಂದ ಬಣ್ಣ ಹಾಕಿರುವ ಪದಗಳ ಬದಲಿಗೆ ಕನ್ನಡ ಪದಗಳನ್ನು ಬಳಸಿ ಮಾತನಾಡೋಣ ಮತ್ತು ಬರೆಯೋಣ.

೧. ನಮ್ಮ ಮನೆಯ **ಕುತ್ತಾ**  ಬೌ ಬೌ ಎಂದು ಬೊಗಳಿತು.

___

___

೨. ನಮ್ಮ ಊರಿನಲ್ಲಿ ದೊಡ್ಡದಾದ **ಲೇಕ್**  ಇದೆ.

___

___

೩. ನಾನು ಶಾಲೆಯಲ್ಲಿ **ದೂದ್**  ಕುಡಿಯುತ್ತೇನೆ.

___

___

೪. ರೋಹಿತನ ಮನೆಯ **ಬಿಲ್ಲಿ**  ಕದ್ದು ಹಾಲು ಕುಡಿಯಿತು.

___

___

೫. ಚಿಂಟುವಿನ ಟಾಮಿ ಯಾವಾಗಲೂ **ಶೇಪುಟ್**  ಅಲ್ಲಾಡಿಸುತ್ತದೆ.

___

___

೬. ಗೋಡೆಯ ಮೇಲಿರುವ **ಪಲ್ಲಿ**  ಲೊಚ ಲೊಚ ಎನ್ನುತ್ತಿತ್ತು.

___

___

| | |
|---|---|
| * ನನಗೆ ಅರ್ಥವಾಗಿದೆ | |
| * ನನಗೆ ಸಹಾಯ ಬೇಕಿದೆ | |

ಶಿಕ್ಷಕರ ಸಹಿ :
ದಿನಾಂಕ :

©KTBS NOT TO BE REPUBLISHED

## ೧೧. ಉಕ್ತಲೇಖನವನ್ನು ತೆಗೆದುಕೊಳ್ಳೋಣ.

| ಕ್ರ.ಸಂ | ಪದಗಳು | ಕ್ರ.ಸಂ | ಪದಗಳು |
|---|---|---|---|
| 1. | | 9. | |
| 2. | | 10. | |
| 3. | | 11. | |
| 4. | | 12. | |
| 5. | | 13. | |
| 6. | | 14. | |
| 7. | | 15. | |
| 8. | | 16. | |

@KTBS
NOT TO BE REPUBLISHED

**ತಪ್ಪಾದ ಪದಗಳನ್ನು ಸರಿಪಡಿಸಿ ಬರೆಯೋಣ.**

★ ಸುಗಮಕಾರರು ಪಠ್ಯದಲ್ಲಿ ಕಲಿತ ಪದಗಳನ್ನು ಉಕ್ತಲೇಖನ ನೀಡಿ, ದೃಢೀಕರಿಸಿ, ಹಿಮ್ಮಾಹಿತಿ ನೀಡುವುದು.

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

೧೧. ನಿಯೋಜಿತ ಕಾರ್ಯ: ನಾವು ಸಾಮಾನ್ಯವಾಗಿ ಬಳಸುವ ಪದಗಳಿಗೆ ಬೇರೆ ಬೇರೆ ಭಾಷೆಯ ಪದಗಳನ್ನು ಹಿರಿಯರ ಸಹಾಯದಿಂದ ಸಂಗ್ರಹಿಸಿ ಬರೆಯೋಣ.

**ಉದಾಹರಣೆ:** ನೀರು:–ಜಲ, ಪಾನಿ, ವಾಟರ್

@KTBS
NOT TO BE REPUBLISHED

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

# ೨. ಅಮ್ಮ ಅಮ್ಮ... (ಪದ್ಯ)

**ಪ್ರವೇಶ: ಈ ಕಥೆಯನ್ನು ಆಲಿಸಿ, ನಂತರ ಅದನ್ನು ನಮ್ಮದೇ ಶೈಲಿಯಲ್ಲಿ ಮುಂದುವರೆಸೋಣ.**

ಒಮ್ಮೆ ಕಾಡಿನಿಂದ ಆನೆಯ ಮರಿಯೊಂದು ತಪ್ಪಿಸಿಕೊಂಡು ಊರಿಗೆ ಬಂದಿತ್ತು. ಪುಟ್ಟು ಮತ್ತು ಗೋಪಿಯು ಮುದ್ದಾದ ಆನೆಮರಿಯನ್ನು ನೋಡಿದರು. ಅದನ್ನು ಮನೆಗೆ ಕರೆದುಕೊಂಡು ಬಂದು ಸಾಕೋಣ ಎಂದು ಯೋಚಿಸಿದರು.

ಆನೆಮರಿಯನ್ನು ಮನೆಗೆ ತಂದರು. ಆನೆಮರಿಗೆ ಪ್ರತಿದಿನ ಸ್ನಾನ, ತಿಂಡಿ, ಊಟ ಮಾಡಿಸುತ್ತಿದ್ದರು. ಒಮ್ಮೆ ಗೋಪಿಗೆ ಆನೆಮರಿಯ ಬಣ್ಣ ಬದಲಿಸಬೇಕು ಅಂತ ಅನ್ನಿಸಿತು. ಪುಟ್ಟುವಿಗೆ ಹೇಳಿ ಬಿಳಿಯ ಬಣ್ಣವನ್ನು ತಂದು ಆನೆಮರಿಗೆ ಹಚ್ಚಿದರು. ಆನೆಮರಿಯ ಬಣ್ಣವನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು.

ಹೀಗಿರುವಾಗ ಒಂದು ದಿನ ಪುಟ್ಟು, ಗೋಪಿ ಆನೆಮರಿಯನ್ನು ಆಟದ ಮೈದಾನಕ್ಕೆ ಕರೆದುಕೊಂಡು ಹೋಗಿದ್ದರು. ಇದ್ದಕ್ಕಿದ್ದಂತೆ ಜೋರಾಗಿ ಮಳೆ ಸುರಿಯಲು ಆರಂಭಿಸಿತು. ಮುಂದೆ ಏನಾಗಿರಬಹುದು....?



@KTBS NOT TO BE REPUBLISHED

ಅಮ್ಮ ಅಮ್ಮ ಅಮ್ಮ
ನನ್ನ ತೋಳಿಗೆ ರೆಕ್ಕೆ ಹಚ್ಚು।
ಸೊಂಟಕ್ಕೆ ಬೆಳ್ಳಿ ಪಟ್ಟಿಕಟ್ಟಿ
ಹಕ್ಕಿ ಪುಚ್ಚ ಚುಚ್ಚು॥

ಹಾರುತ್ತೇವೆ ರೆಕ್ಕೆ ಬಿಚ್ಚಿ
ತೆಂಗಿನ ಮರಕೂ ಮೇಲೆ।
ಜಗಲಿ ಮೇಲೆ ನಿಂತೇ ನಮಗೆ
ಅಮ್ಮ ಟಾಟಾ ಹೇಳೆ॥

ಹಾಗೆ ಹಾಗೆ ಮೇಲೆ ಹೋಗಿ
ಮುಟ್ಟುತ್ತೇವೆ ಮೋಡ।
ಕೇಳುತ್ತೇವೆ ಯಾರೂ ಕೇಳದ
ಚುಕ್ಕಿ ಹಾಡೋ ಹಾಡ॥



**ಪದ–ಪದಗಳ ಅರ್ಥ**

**ಪುಚ್ಚ:** ಪುಕ್ಕ
**ತಿಂಗಳು:** ಚಂದ್ರ, ಚಂದ್ರಮ, ಚಂದಿರ
**ಚುಕ್ಕಿ:** ನಕ್ಷತ್ರ, ತಾರೆ
**ಹೊತ್ತು:** ಸಮಯ, ಘಳಿಗೆ

ತಿಂಗಳ ಊರಿನ ಅಂಗಳ ಸೇರಿ
ಬೆಳ್ಳಿಯ ಮೊಲವನು ನೋಡಿ।
ಹಿಡಿಯುತ್ತೇವೆ ಹಾರೋ ಬಣ್ಣದ
ಜಿಂಕೆಯ ಹೇಗೋ ಮಾಡಿ॥

ಕೊಟ್ಟೆ ಕೊಡುವನು ಚಂದಮಾಮ
ಕೆನ್ನೆ ತುಂಬ ಮುತ್ತು।
ಮುದ್ದಿಸಿ ಬೆಟ್ಟದ ತುದಿಗೆ ಇಳಿಸುವ
ಯಾರು ಇಲ್ಲದ ಹೊತ್ತು॥

**ಡಾ॥ ಎಚ್.ಎಸ್. ವೆಂಕಟೇಶಮೂರ್ತಿ**



**ಕವಿ ಪರಿಚಯ: ಡಾ॥ ಎಚ್.ಎಸ್. ವೆಂಕಟೇಶಮೂರ್ತಿ,** ಇವರ ಬಾಲ್ಯದ ಹೆಸರು ಶ್ರೀನಿವಾಸ. ಇವರು ಇಂದಿನ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಹೊದಿಗೆರೆ ಗ್ರಾಮದಲ್ಲಿ ಜೂನ್, 23ರ 1944ರಂದು ಜನಿಸಿದರು.

ಇವರು ಕವಿತೆ, ನಾಟಕ, ಪ್ರಬಂಧ, ಕಾದಂಬರಿ, ಮಕ್ಕಳ ಸಾಹಿತ್ಯ, ಅನುವಾದ, ವಿಮರ್ಶೆ, ಮೊದಲಾದ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ, ಆಧುನಿಕ ಸಾಹಿತ್ಯದ ಕೃತಿಗಳನ್ನು ಸಾಹಿತ್ಯ ಪ್ರಿಯರಿಗೆ ಕೊಟ್ಟ ಮಹತ್ವದ ಲೇಖಕರಲ್ಲೊಬ್ಬರು. ಕವಿ, ಅಂಕಣಕಾರ, ವಿಮರ್ಶಕ, ನಾಟಕಕಾರ, ಚಿತ್ರ ಕಲಾವಿದರೂ ಹೌದು. ಪ್ರಸ್ತುತ ಕವಿತೆಯಲ್ಲಿ ಅಮ್ಮ ನೀಡುವ ಆತ್ಮವಿಶ್ವಾಸ ಎಷ್ಟು ಚೈತನ್ಯ ತುಂಬುತ್ತದೆ ಎಂಬುದನ್ನು ಮಗುವಿನ ಮೂಲಕ ಹೇಳಿಸಿರುವುದು ಕಂಡು ಬರುತ್ತದೆ.

## ೧. ಈ ಪದಗಳನ್ನು ವಾಕ್ಯಗಳೊಂದಿಗೆ ಅರ್ಥೈಸಿಕೊಂಡು, ಒಂದೊಂದು ವಾಕ್ಯವನ್ನು ರಚಿಸೋಣ.

೧) **ಪುಚ್ಚ:** ನವಿಲು ಬಣ್ಣ ಬಣ್ಣದ **ಪುಚ್ಚ** ಹೊಂದಿರುತ್ತದೆ.

**ಪುಚ್ಚ:** ______________________________

______________________________

೨) **ತಿಂಗಳು:** ರಾತ್ರಿಯ ವೇಳೆ ಆಕಾಶದಲ್ಲಿ **ತಿಂಗಳು** ಹೊಳೆಯುತ್ತದೆ.

**ತಿಂಗಳು:** ______________________________

______________________________

೩) **ಚುಕ್ಕಿ:** ಆಗಸದಲ್ಲಿ ಲೆಕ್ಕವಿರದಷ್ಟು **ಚುಕ್ಕಿ**ಗಳು ಇರುತ್ತವೆ.

**ಚುಕ್ಕಿ:** ______________________________

______________________________

೪) **ಹೊತ್ತು:** ಸಂಜೆಯ **ಹೊತ್ತು** ಸೂರ್ಯನು ಕೆಂಪಗೆ ಕಾಣುತ್ತಾನೆ.

**ಹೊತ್ತು:** ______________________________

______________________________

## ೨. ಧ್ವನಿ ಸಾಮ್ಯತೆ ಬರುವ ಪದಗಳನ್ನು ಬರೆಯೋಣ.

| | | |
|---|---|---|
| ಹಚ್ಚು – ಚುಚ್ಚು | | |
| | | |
| | | |

©KTBS NOT TO BE REPUBLISHED

## ೩. ಪದ್ಯವನ್ನು ಪೂರ್ಣಗೊಳಿಸಿ ಹೇಳೋಣ.

ಅಮ್ಮ ಅಮ್ಮ ಅಮ್ಮ
.............................................. ಹಚ್ಚು।
ಸೊಂಟಕ್ಕೆ ....................................
.............................................. ಚುಚ್ಚು॥

ಹಾರುತ್ತೇವೆ ........................................
.............................................. ಮೇಲೆ।
ಜಗಲಿ .................................... ನಮಗೆ
.............................................. ಹೇಳೆ॥

## ೪. ಚಿತ್ರವನ್ನು ಗಮನಿಸಿ, ಅದನ್ನು ಹೆಸರಿಸುತ್ತಾ, ಪದ್ಯವನ್ನು ಪೂರ್ಣಗೊಳಿಸಿ ಓದೋಣ.

ಬಾ ಬಾ  ಯೆ ಬಣ್ಣದ  ಯೆ
 ಕೊಡುವೆನು ಬಾ ಬಾ  ಯೆ
 ದ ಮೇಲಿನ ಚಂದದ  ಯೆ ನನ್ನೊಡನಾಡಲು ಬಾ ಬಾ

- ಗಿಳಿಗೆ ಬದಲಾಗಿ ಬೇರೆ ಪಕ್ಷಿಯನ್ನು ಸೇರಿಸಿ, ಪದ್ಯವನ್ನು ಹೇಳಿ, ಬರೆಯೋಣ.

- ಗಿಳಿಗೆ ಬದಲಾಗಿ ಬೇರೆ ಪ್ರಾಣಿಯನ್ನು ಸೇರಿಸಿ, ಪದ್ಯವನ್ನು ಹೇಳಿ, ಬರೆಯೋಣ.

© KTBS NOT TO BE REPUBLISHED

## ೫. ಸಚಿತ್ರ ಕಥೆಯನ್ನು ಓದೋಣ.

ಒಮ್ಮೆ  ಮತ್ತು  ಕೂಡಿ, ಬೇಸಾಯ ಮಾಡಲು ಹೊರಟವು. ಜಾಣ  ಯು "ಭೂಮಿಯ ಮೇಲಿನ ಬೆಳೆಯ ಭಾಗ ನನಗೆ, ಭೂಮಿಯ ಒಳಗಿನ ಭಾಗ ನಿನಗೆ" ಎಂದು ಕರಾರು ಹಾಕಿತು. ಇಬ್ಬರು ಸೇರಿ  ಗಳನ್ನು ಬೆಳೆದರು.  ಗಳು  ಯ ಪಾಲಾದವು. ಬೇರು  ಗೆ ದೊರೆಯಿತು. ಬೇಸರದಿಂದ  ಈ ಬಾರಿ ನನಗೆ ಭೂಮಿಯ ಮೇಲಿನ ಭಾಗ ಎಂದಿತು "ಹಾಗೆಯೇ ಆಗಲಿ" ಎಂದು  ಯು ಜಾಣತನದಿಂದ  ಬೆಳೆಯೋಣ ಎಂದಿತು.  ಯು ಒಪ್ಪಿತು,  ಮತ್ತೆ  ಯ ಪಾಲಾಯಿತು. ಬಳ್ಳಿಗಳು ಮಾತ್ರ  ಗೆ ಸಿಕ್ಕಿತು.  ಯ ಮೋಸಗಾರಿಕೆ ತಿಳಿದ  ಯು ಅದರ ಸಹವಾಸವೇ ಬೇಡ ಎಂದು ಹೊರಟು ಹೋಯಿತು.

## ಚಿತ್ರಗಳಿರುವ ಜಾಗದಲ್ಲಿ ಅವುಗಳ ಹೆಸರನ್ನು ಸೇರಿಸಿ ಕಥೆಯನ್ನು ಬರೆಯೋಣ.

@KTBS NOT TO BE REPUBLISHED

* ನನಗೆ ಅರ್ಥವಾಗಿದೆ
* ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :
ದಿನಾಂಕ :

## ೬. ಕಥೆಯ ಮುಂದಿನ ಭಾಗವನ್ನು ಹೇಳೋಣ.

ಒಂದಾನೊಂದು ಕಾಲದಲ್ಲಿ ಒಂದು ದೊಡ್ಡ ಕಾಡಿತ್ತು. ಆ ಕಾಡಿನಲ್ಲಿ ವಾಸವಾಗಿದ್ದ ಆನೆಗೆ ರಾತ್ರಿ ಒಂದು ಕನಸು ಬಿದ್ದಿತು. ಆ ಕನಸಿನಲ್ಲಿ ಆನೆಗೆ ಎರಡು ದೊಡ್ಡ ರೆಕ್ಕೆಗಳು ಬಂದು, ಹಕ್ಕಿಯಂತೆ ಹಾರುವ ಶಕ್ತಿ ಬಂದಿತು. ಆನೆಗೆ ಖುಷಿಯೋ ಖುಷಿ! ಸಂಭ್ರಮದಿಂದ ಉಬ್ಬಿದ ಆನೆ ..................................!?

## ಕಥೆಯ ಮುಂದಿನ ಭಾಗವನ್ನು ಗೆಳೆಯರೊಂದಿಗೆ ಹಂಚಿಕೊಳ್ಳೋಣ ಮತ್ತು ಬರೆಯೋಣ.

ರಾಜನೊಬ್ಬನಿಗೆ ಜನರು ತನ್ನ ಆಡಳಿತದ ಮೇಲೆ ಇಟ್ಟಿರುವ ನಂಬಿಕೆಯನ್ನು ಪರೀಕ್ಷಿಸುವ ಆಸೆಯಾಯಿತು. ಮಂತ್ರಿಯನ್ನು ಕರೆದು ಈ ವಿಷಯವನ್ನು ತಿಳಿಸಿದನು. ಮಂತ್ರಿಯು "ಮಹಾಪ್ರಭುಗಳೇ, ಅರಮನೆಯ ಮುಂದೆ ಒಂದು ದೊಡ್ಡ ಪಾತ್ರೆಯನ್ನಿಟ್ಟು ಕತ್ತಲಾದ ಬಳಿಕ ರಾಜನ ಆಳ್ವಿಕೆಯ ಮೇಲೆ ನಂಬಿಕೆ ಇರುವ ಜನರು ಒಂದು ಲೋಟ ಹಾಲನ್ನು ಹಾಕಲು ಮತ್ತು ನಂಬಿಕೆ ಇಲ್ಲದ ಜನರು ಒಂದು ಲೋಟ ನೀರನ್ನು ಹಾಕಲು ಡಂಗುರ ಸಾರಿಸಿಯೆಂದು ಸಲಹೆ ಕೊಟ್ಟನು". ಆಗ ರಾಜನು ಆಜ್ಞೆಯನ್ನು ಹೊರಡಿಸಿದನು. ರಾಜನ ಆಜ್ಞೆಯಂತೆ ಭಟನೊಬ್ಬನು ಕೇಳ್ರಪ್ಪೋ... ಕೇಳ್ರಿ..... ಕೇಳ್ರಮ್ಮೋ.... ಕೇಳ್ರಿ.................................?

@KTBS NOT TO BE REPUBLISHED

| | |
|---|---|
| * ನನಗೆ ಅರ್ಥವಾಗಿದೆ | ☐ |
| * ನನಗೆ ಸಹಾಯ ಬೇಕಿದೆ | ☐ |

ಶಿಕ್ಷಕರ ಸಹಿ :
ದಿನಾಂಕ :

## ೭. ಸುಳಿವು ಚಿತ್ರ ಮತ್ತು ಪದಗಳನ್ನು ಆಧರಿಸಿ ಪದ್ಯ ಪೂರ್ಣಗೊಳಿಸೋಣ.



ಕಾಡಿನಲ್ಲಿ .....................ಯೊಂದು
.................................. ಹತ್ತಿತು।
ಕತ್ತನೆತ್ತಿ ಅತ್ತ ಇತ್ತ
ತಿರುಗಿ..................................॥



ಅಲ್ಲೆ ಇದ್ದ ದೊಡ್ಡ ........................
ಮರವನೇರಿತು।
ಘಮ ಘಮಿಸುವ ಹಲಸು ಹಣ್ಣು
ಕಿತ್ತು .......................................॥

ತೊಳೆಯ ಬಿಡಿಸಿ ..................... ಬೆರಸಿ
....................................... ಸವಿಯಿತು।
ಹಣ್ಣು ಸವಿದು ಖುಷಿಗೆ ಹಾರಿ
ಕುಣಿದು ....................................॥

**ಸುಳಿವುಗಳು:**
ಬೆಟ್ಟವನ್ನು, ನೋಡಿತು, ತಂದಿತು, ಕರಡಿ, ತಿಂದು, ಮರ, ಓಡಿ ಹೋಯಿತು, ಹಲಸು, ಜೇನ, ನಲಿಯಿತು

ಹೊಟ್ಟೆ ಬಿರಿಯೆ ತಿಂದು ಕರಡಿ
ಗುಹೆಗೆ ..............................।
ಜಗವ ಮರೆತು ಒರಗಿ ಮಲಗಿ
ನಿದ್ದೆ ಹೊಡೆಯಿತು॥



@KTBS NOT TO BE REPUBLISHED

* ನನಗೆ ಅರ್ಥವಾಗಿದೆ
* ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :
ದಿನಾಂಕ :

## ೮. ಭಿತ್ತಿಪತ್ರದಲ್ಲಿನ ಅಂಶಗಳನ್ನು ಗಮನಿಸಿ, ಚರ್ಚಿಸೋಣ.

ಈ ಚಿತ್ರದಲ್ಲಿರುವ ಘೋಷಣಾ ವಾಕ್ಯ

ಪ್ರಕಟಿಸಿರುವ ಇಲಾಖೆ

**ವಿಶೇಷ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ**



**ಲಸಿಕೆ ಹಾಕಿಸಿ ಮಗುವಿನ ಜೀವ ಉಳಿಸಿ**

ನಿಮ್ಮ ಮನೆಗೆ ಸಮೀಪದ ಪಲ್ಸ್ ಪೋಲಿಯೋ ಬೂತಿನಲ್ಲಿ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ತಪ್ಪದೆ ಎರಡು ಸುತ್ತಿನಲ್ಲೂ ಪೋಲಿಯೋ ಲಸಿಕೆ ಹಾಕಿಸಿ.

ಪ್ರಕಟಣೆ : ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಇದು ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಸಂಬಂಧಿಸಿದೆ.

**ಭಿತ್ತಿಪತ್ರಗಳು:** ಗೋಡೆಗೆ ಅಂಟಿಸುವ ಪ್ರಚಾರ ಪತ್ರಗಳು. ಇವು ದೊಡ್ಡದಾಗಿದ್ದು, ಸಂದೇಶವನ್ನು ಚಿತ್ರ ಸಹಿತ ಹಾಗೂ ಸ್ಪಷ್ಟವಾಗಿ ತಿಳಿಸುತ್ತವೆ.

© KTBS NOT TO BE REPUBLISHED

## ೯. ಭಿತ್ತಿಪತ್ರವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸೋಣ.




೧. ಈ ಭಿತ್ತಿಪತ್ರ ಯಾವ ವಿಷಯಕ್ಕೆ ಸಂಬಂಧಿಸಿದೆ?

______________________________

೨. ಈ ಭಿತ್ತಿಪತ್ರವನ್ನು ಹೊರಡಿಸಿರುವ ಇಲಾಖೆ ಯಾವುದು?

______________________________

೩. ನೀನು ನೋಡಿರುವ ಭಿತ್ತಿಪತ್ರಗಳನ್ನು ಹೆಸರಿಸು.

______________________________

# ೧೦. ಈ ಜಾಹೀರಾತಿನಲ್ಲಿನ ಅಂಶಗಳನ್ನು ಗಮನಿಸಿ, ಮಾತನಾಡೋಣ.




@KTBS
NOT TO BE REPUBLISHED

## ೧೧. ಚಿತ್ರ ಸುಳಿವಿನ ಸಹಾಯದಿಂದ ಜಾಹೀರಾತು ರಚಿಸೋಣ.

### ಜಾಹೀರಾತು–1





### ಜಾಹೀರಾತು–2

ಇಷ್ಟದ ಚಿತ್ರ ರಚಿಸಿ–ಜಾಹೀರಾತು ಹೇಳೋಣ.

@KTBS
NOT TO BE REPUBLISHED

ಹೇಳಿದ ಜಾಹೀರಾತನ್ನು ಹಿರಿಯರ ಸಹಾಯದಿಂದ ಬರೆಯೋಣ.

೧೨. ಗೊತ್ತಿರುವ ಜಾಹೀರಾತುಗಳ ಬಗ್ಗೆ ಗೆಳೆಯರೊಂದಿಗೆ ಸಂಭಾಷಣೆ ನಡೆಸೋಣ ಮತ್ತು ಯಾವುದಾದರೊಂದು ಜಾಹೀರಾತಿನ ಬಗ್ಗೆ ಇಲ್ಲಿ ಬರೆಯೋಣ.

@KTBS
NOT TO BE REPUBLISHED

೧೩. ಗೆಳೆಯ ಅಥವಾ ಗೆಳತಿ ಹೇಳಿರುವ ಯಾವುದಾದರೊಂದು ಕಥೆಯನ್ನು ಬರೆಯೋಣ.

@KTBS
NOT TO BE REPUBLISHED

## ೧೪. ಇದುವರೆಗೂ ಕಲಿತಿರುವ ಹೊಸ ಪದಗಳ ಉಕ್ತಲೇಖನವನ್ನು ತೆಗೆದುಕೊಳ್ಳೋಣ.

| ಕ್ರ.ಸಂ | ಪದಗಳು | ಕ್ರ.ಸಂ | ಪದಗಳು |
|---|---|---|---|
| 1. | | 9. | |
| 2. | | 10. | |
| 3. | | 11. | |
| 4. | | 12. | |
| 5. | | 13. | |
| 6. | | 14. | |
| 7. | | 15. | |
| 8. | | 16. | |

@KTBS
NOT TO BE REPUBLISHED

ತಪ್ಪಾದ ಪದಗಳನ್ನು ಸರಿಪಡಿಸಿ ಬರೆಯೋಣ.

★ ಸುಗಮಕಾರರು ಪಠ್ಯದಲ್ಲಿ ಕಲಿತ ಪದಗಳನ್ನು ಉಕ್ತಲೇಖನ ನೀಡಿ, ದೃಢೀಕರಿಸಿ, ಹಿಮ್ಮಾಹಿತಿ ನೀಡುವುದು.

* ನನಗೆ ಅರ್ಥವಾಗಿದೆ
* ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :
ದಿನಾಂಕ :

೧೫. ನಿಯೋಜಿತ ಕಾರ್ಯ: ಹಿರಿಯರ ಸಹಾಯದಿಂದ ಯಾವುದಾದರೊಂದು ಭಿತ್ತಿಪತ್ರ ಸಂಗ್ರಹಿಸಿ ಅಂಟಿಸೋಣ.

@KTBS
NOT TO BE REPUBLISHED

# ೩. ಸ್ವಾತಂತ್ರ್ಯ ದಿನಾಚರಣೆ

**ಪ್ರವೇಶ: ಇಲ್ಲಿನ ಚಿತ್ರಗಳಿಗೆ ಬಣ್ಣ ಹಚ್ಚಿ ಮಾತನಾಡೋಣ:**



@KTBS
NOT TO BE REPUBLISHED

ಕೇಸರಿ | ಬಿಳಿ | ಹಸಿರು



ಅಶೋಕ ಚಕ್ರ

ಬಾವುಟದ ಬಣ್ಣಗಳ ವಿಶೇಷತೆ ಕುರಿತು ಚರ್ಚಿಸೋಣ.

• ಶಾಲೆಯಲ್ಲಿ ರಾಷ್ಟ್ರಧ್ವಜ ಹಾರಿಸುವ ದಿನಗಳನ್ನು ಪಟ್ಟಿ ಮಾಡೋಣ ಮತ್ತು ಅವುಗಳ ಕುರಿತು ಮಾತನಾಡೋಣ:

೧.

೨.

೩.

• ಶಾಲೆಯಲ್ಲಿ ಭಾಗವಹಿಸಿದ 6 ದಿನಾಚರಣೆಗಳನ್ನು ಹೆಸರಿಸೋಣ.

| | |
|---|---|
| ೧. | |
| ೨. | |
| ೩. | |
| ೪. | |
| ೫. | |
| ೬. | |

@KTBS NOT TO BE REPUBLISHED

# ಸ್ವಾತಂತ್ರ್ಯ ದಿನಾಚರಣೆ

**ಪ್ರವೇಶ :** ನಾವು ಹಬ್ಬಗಳನ್ನು ಆಚರಿಸುತ್ತೇವೆ. ಹಬ್ಬ ಆಚರಿಸಲು ಕೆಲವು ಸಿದ್ಧತೆಗಳು ಬೇಕು. ಎಲ್ಲ ಸಿದ್ಧತೆಗಳನ್ನು ಒಬ್ಬರೇ ಮಾಡಬೇಕಾದರೆ ತೊಂದರೆ ಅಲ್ಲವೇ? ಹಾಗಾದರೆ ಆ ತೊಂದರೆ ನಿವಾರಿಸಲು ಏನು ಮಾಡಬೇಕು ಎಂಬ ಕುತೂಹಲವೇ? ಶಾಲೆಯಲ್ಲಿ ಗುರುಗಳು ಹಾಗೂ ವಿದ್ಯಾರ್ಥಿಗಳು ಅನುಸರಿಸಿದ ಕ್ರಮವನ್ನು ಗಮನಿಸಿ ತಿಳಿಯೋಣ.



ಬಿಡುವಿನ ಸಮಯ. ಮುಖ್ಯ ಗುರುಗಳು ಶಾಲಾ ವಿದ್ಯಾರ್ಥಿ ಮಂತ್ರಿಮಂಡಲದ ಸಭೆ ಕರೆದರು. ಮಂತ್ರಿಗಳು ಸಭೆಗೆ ಬಂದರು.

**ಮುಖ್ಯ ಗುರುಗಳು** : ಮಕ್ಕಳೇ, ಇದು ಆಗಸ್ಟ್ ತಿಂಗಳು. ಈ ತಿಂಗಳಲ್ಲಿ ಆಚರಿಸುವ ರಾಷ್ಟ್ರೀಯ ಹಬ್ಬ ಯಾವುದು? ನೀ ಹೇಳಬಲ್ಲೆಯಾ ರಾಜು?

**ಎಲ್ಲರೂ** : ಸ್ವಾತಂತ್ರ್ಯ ದಿನಾಚರಣೆ ಸರ್.

**ಮುಖ್ಯ ಗುರುಗಳು** : ಹೀಗೆ ಎಲ್ಲರೂ ಒಟ್ಟಾಗಿ ಮಾತನಾಡಬಾರದು. ಸರದಿ ಅನುಸರಿಸಬೇಕು ತಿಳಿಯಿತೇ? ಸರಿ, ರಾಜು ನೀನು ಹೇಳು, ಸ್ವಾತಂತ್ರ್ಯ ದಿನಾಚರಣೆ ಎಂದರೇನು?

**ರಾಜು (ಮುಖ್ಯಮಂತ್ರಿ)** : ನಮ್ಮ ದೇಶ ಸ್ವತಂತ್ರವಾದ ದಿನದ ನೆನಪಿಗಾಗಿ ಪ್ರತಿ ವರ್ಷ ದೇಶದಾದ್ಯಂತ ಆಚರಿಸುವ ಹಬ್ಬ.

**ಮೇರಿ (ಆರೋಗ್ಯ ಮಂತ್ರಿ)** : ಸ್ವತಂತ್ರವಾದ ದಿನ! ಹಾಗೆಂದರೇನು ಸರ್?

**ಮುಖ್ಯ ಗುರುಗಳು** : ಹಿಂದೆ ನಮ್ಮ ದೇಶವನ್ನು ಬ್ರಿಟಿಷರು ಆಳುತ್ತಿದ್ದರು. ದೇಶದ ಸ್ವಾಭಿಮಾನಿ ಜನರು ಗಾಂಧೀಜಿಯವರ ನೇತೃತ್ವದಲ್ಲಿ ಅವರ ವಿರುದ್ಧ ಹೋರಾಡಿ ಸ್ವಾತಂತ್ರ್ಯ ತಂದು ಕೊಟ್ಟರು. ಅವರ ದೇಶಾಭಿಮಾನ, ತ್ಯಾಗ ಹಾಗೂ ಬಲಿದಾನದಿಂದ 1947 ಆಗಸ್ಟ್ 15 ರಂದು ನಮ್ಮ ದೇಶ ಸ್ವತಂತ್ರವಾಯಿತು. ದೇಶ ಸ್ವತಂತ್ರವಾದ ಸವಿ ನೆನಪಿಗೆ ಪ್ರತಿ ವರ್ಷ ದೇಶಾದ್ಯಂತ ಆಚರಿಸುವ ಹಬ್ಬವೇ ಸ್ವಾತಂತ್ರ್ಯ ದಿನಾಚರಣೆ.

**ಷರೀಫ್(ಉಪ ಮುಖ್ಯಮಂತ್ರಿ)** : ನಮ್ಮ ಶಾಲೆಯಲ್ಲೂ ಆಚರಿಸುತ್ತೇವಲ್ಲ ಸರ್?

©KTBS NOT TO BE REPUBLISHED

**ಮುಖ್ಯ ಗುರುಗಳು** : ಹೌದು, ಅದಕ್ಕಾಗಿ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು.

**ಷಾಹಿನ್ (ಗೃಹ ಮಂತ್ರಿ)** : ಏನೇನು ಸಿದ್ಧತೆ ಮಾಡಬೇಕಿದೆ? ಹೇಳಿ ಸರ್.

**ಮುಖ್ಯ ಗುರುಗಳು** : ಆಟೋಟ ಸ್ಪರ್ಧೆ ಏರ್ಪಡಿಸಬೇಕು. ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿ ಕೊಡುವವರನ್ನು ಗುರುತಿಸಬೇಕು. ಮೈದಾನವನ್ನು ಸ್ವಚ್ಛಗೊಳಿಸಬೇಕು. ಶಾಲೆಯನ್ನು ತಳಿರು ತೋರಣಗಳಿಂದ ಅಲಂಕರಿಸಬೇಕು.

**ಐಶ್ವರ್ಯ (ಸಂಸ್ಕೃತಿ ಮಂತ್ರಿ)** : ಗುರುಗಳೇ, ನಾವು ಕೆಲಸ ಹಂಚಿಕೊಂಡು ಸಿದ್ಧತೆ ಮಾಡುತ್ತೇವೆ.

**ಮುಖ್ಯ ಗುರುಗಳು** : ಸಂತೋಷ. ಯಾರು ಯಾರು, ಯಾವ ಯಾವ ಕೆಲಸಗಳನ್ನು ಹಂಚಿಕೊಳ್ಳುವಿರಿ?

**ವಿವೇಕ್ (ಕ್ರೀಡಾ ಮಂತ್ರಿ)** : ಸರ್, ಮಂತ್ರಿ ಮಂಡಲದ ಎಲ್ಲ ಸದಸ್ಯರು ಸೇರಿ ಆಟೋಟ ಸ್ಪರ್ಧೆ ನಡೆಸಿ ವಿಜೇತರ ಪಟ್ಟಿಯನ್ನು ಸಿದ್ಧಪಡಿಸುತ್ತೇವೆ. (ಷಾಹಿನ್ ಮತ್ತು ಐಶ್ವರ್ಯ ಮಾತನಾಡುತ್ತಿದ್ದರು)

**ಮುಖ್ಯ ಗುರುಗಳು** : ಷಾಹಿನ್, ಐಶ್ವರ್ಯ ಒಬ್ಬರು ಮಾತಾಡುವಾಗ ನಿಮ್ಮ ನಿಮ್ಮೊಳಗೆ ಮಾತಾಡಬಾರದು. ಇತರರ ಅಭಿಪ್ರಾಯವನ್ನು ಕೇಳಿಸಿಕೊಳ್ಳಬೇಕು.

**ಐಶ್ವರ್ಯ (ಸಂಸ್ಕೃತಿ ಮಂತ್ರಿ)** : ಕ್ಷಮಿಸಿ ಸರ್, ಇನ್ನು ಮೇಲೆ ಗಮನವಿಟ್ಟು ಕೇಳುತ್ತೇವೆ.

**ಮುಖ್ಯ ಗುರುಗಳು** : ಹ್ಞಾ! ಜಾಣ ಮಕ್ಕಳು.

**ಕಾರ್ತಿಕ್(ಪೌರಾಡಳಿತ ಮಂತ್ರಿ)** : ಸರ್, ನಾವು ನಾಲ್ಕನೆಯ ತರಗತಿಯವರು ಶಾಲೆಯ ಮೈದಾನವನ್ನು ಸ್ವಚ್ಛಗೊಳಿಸುತ್ತೇವೆ.

**ಐಶ್ವರ್ಯ (ಸಂಸ್ಕೃತಿ ಮಂತ್ರಿ)** : ನಾನು ಸಾಂಸ್ಕೃತಿಕ ಕಾರ್ಯಕ್ರಮ ನೀಡುವವರ ಪಟ್ಟಿ ಸಿದ್ಧಪಡಿಸುತ್ತೇನೆ.

**ಮೇರಿ (ಆರೋಗ್ಯ ಮಂತ್ರಿ)** : ನಾವು ಎರಡನೆಯ ತರಗತಿಯವರು ಬಣ್ಣದ ಕಾಗದದಿಂದ ತೋರಣ ಕಟ್ಟುತ್ತೇವೆ.

**ಪಂಕಜ (ಹಣಕಾಸು ಮಂತ್ರಿ)** : ನಾವು 3ನೇ ತರಗತಿಯವರು ಧ್ವಜಸ್ತಂಭವನ್ನು ಸಿಂಗರಿಸುತ್ತೇವೆ ಸರ್.

**ಐಶ್ವರ್ಯ (ಸಂಸ್ಕೃತಿ ಮಂತ್ರಿ)** : ಧ್ವಜ ಸ್ತಂಭದ ಸುತ್ತ ರಂಗವಲ್ಲಿ ಹಾಕಿದರೆ ಚೆನ್ನಾಗಿರುತ್ತದೆ.

**ಮೇರಿ (ಆರೋಗ್ಯ ಮಂತ್ರಿ)** : ಒಳ್ಳೆಯ ಸಲಹೆ, ಪಂಕಜ ಚೆನ್ನಾಗಿ ರಂಗವಲ್ಲಿ ಹಾಕುತ್ತಾಳೆ. ಅವಳಿಂದ ಹಾಕಿಸೋಣವೇ ಸರ್?

© KTBS NOT TO BE REPUBLISHED

ಮುಖ್ಯ ಗುರುಗಳು : ಒಳ್ಳೆಯದು, ಮೇರಿಯ ಸಲಹೆ ಎಲ್ಲರಿಗೂ ಒಪ್ಪಿಗೆಯೇ?

ಎಲ್ಲರೂ : ಓ..... ಆಗಬಹುದು ಸರ್.

ಕಾರ್ತಿಕ್(ಪೌರಾಡಳಿತ ಮಂತ್ರಿ) : ಅಲಂಕಾರಕ್ಕೆ ಸಾಮಗ್ರಿಗಳನ್ನು ತರುವವರು ಯಾರು?

ರಾಜು (ಮುಖ್ಯಮಂತ್ರಿ) : ನಮ್ಮ ತೋಟದಿಂದ ಮಾವಿನ ತಳಿರು, ಬಾಳೆಕಂಬ ತರುತ್ತೇನೆ. ಎಲ್ಲರೂ ಸೇರಿ ಶಾಲೆಯನ್ನು ಸಿಂಗರಿಸೋಣ.

ಐಶ್ವರ್ಯ (ಸಂಸ್ಕೃತಿ ಮಂತ್ರಿ) : ನಾವು ಐದನೆಯ ತರಗತಿಯವರು ರಾಷ್ಟ್ರ ನಾಯಕರ ಭಾವ ಚಿತ್ರಗಳಿಗೆ ಹೂವಿನ ಹಾರ ಹಾಕಿ ಅಲಂಕರಿಸುತ್ತೇವೆ. ಸರ್ ಮತ್ತೇ... (ಮಾತು ಮುಂದುವರಿಸುವಳು)

ಮುಖ್ಯ ಗುರುಗಳು : ಐಶ್ವರ್ಯಾ, ಇತರರಿಗೂ ಮಾತನಾಡಲು ಅವಕಾಶ ಕೊಡಬೇಕಲ್ಲವೇ?

ರಮಾ (ವಿದ್ಯಾ ಮಂತ್ರಿ) : ನಾನು ಒಂದನೆಯ ತರಗತಿಯವರೊಡನೆ ಸೇರಿ ಶಾಲಾ ಕೈತೋಟದಿಂದ ಹೂಗಳನ್ನು ಬಿಡಿಸಿ ತರುತ್ತೇನೆ.

ಮುಖ್ಯ ಗುರುಗಳು : ಸರಿ, ಹಾಗಾದರೆ ನಾನು ಕಾರ್ಯಕ್ರಮಕ್ಕೆ ಬರುವಂತೆ ಅತಿಥಿಗಳನ್ನು ಆಮಂತ್ರಿಸುತ್ತೇನೆ. ನಿಮ್ಮ ಕೆಲಸಗಳಲ್ಲಿ ಶಿಕ್ಷಕರು ಮಾರ್ಗದರ್ಶನ ನೀಡುತ್ತಾರೆ. ಮುಂದಿನ ಸಿದ್ಧತೆ ಮಾಡಿಕೊಳ್ಳಿ.

**(ಎಲ್ಲರೂ ಶಿಕ್ಷಕರ ಮಾರ್ಗದರ್ಶನದಲ್ಲಿ ತಮ್ಮ ಕೆಲಸಕ್ಕೆ ಪೂರ್ವತಯಾರಿ ಮಾಡಿಕೊಂಡರು.)**



ಸ್ವಾತಂತ್ರ್ಯ ದಿನಾಚರಣೆಯ ದಿನದಂದು ಮಕ್ಕಳು ನಸುಕಿನಲ್ಲಿಯೇ ಎದ್ದು ಸಿದ್ಧರಾದರು. ಸಮವಸ್ತ್ರ ಧರಿಸಿ ಶಾಲೆಗೆ ಬಂದರು. ಎಲ್ಲರೂ ತಾವು ವಹಿಸಿಕೊಂಡಿದ್ದ ಕೆಲಸವನ್ನು ಪೂರ್ಣಗೊಳಿಸಿದರು. ಗುರುಗಳೊಂದಿಗೆ ಜಯಘೋಷ ಹಾಕುತ್ತ ಪ್ರಭಾತಪೇರಿಯಲ್ಲಿ ಪಾಲ್ಗೊಂಡರು. ಮಕ್ಕಳ ಶಿಸ್ತನ್ನು ನೋಡಿ ಗ್ರಾಮಸ್ಥರು ಸಂತೋಷಪಟ್ಟರು.

ಶಾಲಾ ಮೈದಾನದಲ್ಲಿ ಎಸ್.ಡಿ.ಎಂ.ಸಿ ಅಧ್ಯಕ್ಷರು ಧ್ವಜಾರೋಹಣ ಮಾಡಿದರು. ಎಲ್ಲರೂ ರಾಷ್ಟ್ರಗೀತೆ ಹಾಡಿದರು. ಅನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಗುರುಗಳು ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ದೇಶಭಕ್ತಿಯ ಕುರಿತು ಮಾತನಾಡಿದರು. ಆಟೋಟ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮುಖ್ಯ ಅತಿಥಿಗಳು ಬಹುಮಾನ ವಿತರಿಸಿದರು. ಕೊನೆಯಲ್ಲಿ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ನೆರೆದಿದ್ದ ಜನರು ಸಂತೋಷದಿಂದ ಚಪ್ಪಾಳೆ ತಟ್ಟಿದರು. ಎಲ್ಲರೂ ಸಿಹಿ ಸವಿದು ಕಾರ್ಯಕ್ರಮ ಮೆಲುಕು ಹಾಕುತ್ತಾ ತೆರಳಿದರು.

© KTBS NOT TO BE REPUBLISHED

## ೧. ಪದ ಪದಗಳ ಅರ್ಥ ಓದಿ ತಿಳಿಯೋಣ.

| | |
|---|---|
| ರಾಷ್ಟ್ರ – ದೇಶ;<br>ಸರದಿ – ಅನುಕ್ರಮ;<br>ಸ್ವಾಭಿಮಾನ – ಆತ್ಮಗೌರವ;<br>ಸ್ಪರ್ಧೆ – ಪೈಪೋಟಿ;<br>ತಳಿರು – ಚಿಗುರು;<br>ಅಭಿಪ್ರಾಯ – ಅನಿಸಿಕೆ;<br>ಧ್ವಜಸ್ತಂಭ – ಬಾವುಟ ಹಾರಿಸುವ ಕಂಬ;<br>ಭಾವಚಿತ್ರ – ವ್ಯಕ್ತಿಯ ಚಿತ್ರ; | ಆಮಂತ್ರಿಸು – ಆಹ್ವಾನಿಸು;<br>ನೆರೆ – ಒಟ್ಟಾಗು, ಗುಂಪು ಸೇರು;<br>ಮಾರ್ಗದರ್ಶನ – ತಿಳಿ ಹೇಳುವುದು, ದಾರಿ ತೋರುವುದು;<br>ನಸುಕು – ಮುಂಜಾನೆ, ಬೆಳಗಿನ ಜಾವ;<br>ಜಯಘೋಷ – ಜಯಕಾರ;<br>ವಿಜೇತರು – ಗೆದ್ದವರು; |

## ೨. ಇವುಗಳಿಗೆ ಕಾರಣ ಕೊಡೋಣ.

೧) ಮುಖ್ಯ ಗುರುಗಳು ಮಂತ್ರಿ ಮಂಡಲದ ಸಭೆ ಕರೆದರು.

______________________________

______________________________

೨) ಮಕ್ಕಳು ನಸುಕಿನಲ್ಲಿಯೇ ಎದ್ದು ಸಮವಸ್ತ್ರ ಧರಿಸಿ ಸಿದ್ಧರಾದರು.

______________________________

______________________________

@KTBS NOT TO BE REPUBLISHED

## ೩. ಈ ಮಾತುಗಳನ್ನು ಯಾರು? ಯಾರಿಗೆ ಹೇಳಿದರು? ಎಂಬುದನ್ನು ಬರೆಯೋಣ

೧) "ನಮ್ಮ ಶಾಲೆಯಲ್ಲೂ ಆಚರಿಸುತ್ತೇವಲ್ಲ ಸರ್?"

ಯಾರು? : ______________________________

ಯಾರಿಗೆ ಹೇಳಿದರು? : ______________________________

೨) "ನಮ್ಮ ತೋಟದಿಂದ ಮಾವಿನ ತಳಿರು, ಬಾಳೆಕಂಬ ತರುತ್ತೇನೆ."

ಯಾರು? : ______________________________

ಯಾರಿಗೆ ಹೇಳಿದರು? : ______________________________

## ೪. ನಾನೇನು ಮಾಡಿದೆ ಬರೆಯೋಣ.

**‘ನಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ ಕುರಿತು ಚರ್ಚಿಸಿ ಬರೆಯೋಣ:**

## ೫. ಚಿತ್ರವನ್ನು ಗಮನಿಸಿ ಓದೋಣ, ಗೆಳೆಯರೊಂದಿಗೆ ಚರ್ಚಿಸೋಣ.

### ‘ಹರ್ ಘರ್ ತಿರಂಗಾ’




2022ನೇ ಇಸವಿಗೆ ದೇಶ ಸ್ವಾತಂತ್ರ್ಯ ಗಳಿಸಿ 75 ವಸಂತಗಳನ್ನು ಪೂರೈಸಿದ ನೆನಪಿಗಾಗಿ ಈ ಅಮೃತ ಮಹೋತ್ಸವವನ್ನು ಆಚ–ರಿಸಲಾಯಿತು. ಈ ಖುಷಿಯನ್ನು ಸಂಭ್ರಮಿಸುವ ಸಲುವಾಗಿ, ಮೂರು ದಿನಗಳ ಕಾಲ ಧ್ವಜಾರೋಹಣ ಮಾಡಲು ತೀರ್ಮಾನಿಸಲಾಯಿತು.

ಅದರಂತೆ ದಿನಾಂಕ 13 ರಿಂದ 15ರ ವರೆಗೆ ದೇಶದ ಪ್ರತೀ ಮನೆ ಮನೆಗಳಲ್ಲಿ, ಸರ್ಕಾರಿ, ಖಾಸಗಿ ಕಟ್ಟಡಗಳ ಮೇಲೆ ನಮ್ಮ ರಾಷ್ಟ್ರ ಧ್ವಜವನ್ನು ಹಾರಿಸಲಾಯಿತು.

©KTBS
NOT TO BE REPUBLISHED

## ೬. ಈ ಚಿತ್ರಗಳ ಕುರಿತು ಚರ್ಚಿಸೋಣ:





**ದಿನಾಚರಣೆ ಬಗ್ಗೆ ಚಿತ್ರ, ಕವನ ಅಥವಾ ಲೇಖನ ಇದ್ದಲ್ಲಿ ಯಾವುದಾದರೂ ಒಂದನ್ನು ಬರೆಯಬಹುದು / ಚಿತ್ರಿಸಬಹುದು.**

@KTBS
NOT TO BE REPUBLISHED

## ೭. ಚಿತ್ರಗಳ ಕುರಿತು ಗೆಳೆಯರೊಂದಿಗೆ ಚರ್ಚಿಸಿ, ಅಭಿಪ್ರಾಯ ಹೇಳೋಣ.






NOT TO BE REPUBLISHED

❋ ಚಿತ್ರಗಳ ಕುರಿತು ಇಲ್ಲಿ ಬರೆಯೋಣ:

1. ________________________________________

________________________________________

________________________________________

________________________________________

2. ________________________________________

________________________________________

________________________________________

________________________________________

೮. ಶಾಲೆಯಲ್ಲಿ ಆಚರಿಸಿದ ಪರಿಸರ ದಿನಾಚರಣೆ ಕುರಿತು ಚರ್ಚಿಸಿ, ಬರೆಯೋಣ.

________________________________________

________________________________________

________________________________________

________________________________________

________________________________________

________________________________________

@KTBS NOT TO BE REPUBLISHED

೯. ದಿನಾಚರಣೆಗಳನ್ನು ಸೂಕ್ತ ದಿನಾಂಕಗಳೊಂದಿಗೆ ಹೊಂದಿಸೋಣ.

| | |
|---|---|
| ಕನ್ನಡ ರಾಜ್ಯೋತ್ಸವ | ಜನವರಿ–೨೬ |
| ಸ್ವಾತಂತ್ರ್ಯ ದಿನಾಚರಣೆ | ನವೆಂಬರ್–೧೪ |
| ಗಣರಾಜ್ಯೋತ್ಸವ | ನವೆಂಬರ್–೧ |
| ಮಕ್ಕಳ ದಿನಾಚರಣೆ | ಆಗಸ್ಟ್–೧೫ |

## ೧೦. ಕೊಟ್ಟಿರುವ ಚಿತ್ರ ಕಥೆಯನ್ನು ಗಟ್ಟಿಯಾಗಿ ಓದೋಣ.



ಒಂದು ದಟ್ಟವಾದ ಕಾಡು ಇತ್ತು. ಆ ಕಾಡಿನಲ್ಲಿ ಹುಲಿ, ಆನೆ ಮೊಲ ಇತ್ಯಾದಿ ಪ್ರಾಣಿಗಳು ವಾಸವಾಗಿದ್ದವು. ಒಂದು ದಿನ ಮೊಲಗಳು ಸಂತಸದಿಂದ ಹಳ್ಳದ ದಡದಲ್ಲಿ ಆಟವಾದುತ್ತಿದ್ದವು.



ಮೊಲಗಳನ್ನು ನೋಡಿದ ಹಸಿದ ಹುಲಿಯು ಅವುಗಳನ್ನು ತಿನ್ನಲು ಘರ್ಜಿಸಿತು. ಹುಲಿಯ ಘರ್ಜನೆ ಕೇಳಿದ ಮೊಲಗಳು ಆನೆಯ ಬಳಿ ಹೋಗಿ ಹುಲಿಯಿಂದ ರಕ್ಷಿಸಲು ಕೇಳಿಕೊಂಡವು.



ಆಗ ಆನೆಯು ಮೊಲಗಳನ್ನು ತನ್ನ ಸೊಂಡಿಲಿನ ಸಹಾಯದಿಂದ ತನ್ನ ಬೆನ್ನಿನ ಮೇಲೆ ಏರಿ ಹೋಗುವಂತೆ ಹೇಳಿತು ಹಾಗೂ ಅವು ಏರಲು ಸಹಾಯ ಮಾಡಿತು.



ಮೊಲಗಳನ್ನು ಬೆನ್ನಟ್ಟಿ ಬಂದಿದ್ದ ಹುಲಿರಾಯನಿಗೆ ಆನೆಯು ತನ್ನ ಸೊಂಡಿಲಿನಿಂದ ನೀರನ್ನು ಎರಚಿತು. ನೀರಿನ ರಭಸಕ್ಕೆ ಹೆದರಿ ಹುಲಿಯು ಓಡಿ ಹೋಯಿತು. ಆಗ ಮೊಲಗಳು ತಮ್ಮ ಜೀವ ಉಳಿಯಿತು ಎಂದು ಸಂತೋಷಪಟ್ಟವು. ಆನೆಗೆ ಧನ್ಯವಾದ ಹೇಳಿದವು.

@KTBS NOT TO BE REPUBLISHED

೧೧. ಕಥೆಯಲ್ಲಿ ಬರುವ ಪಾತ್ರಗಳಲ್ಲಿ ನಿನಗೆ ಇಷ್ಟವಾದ ಪಾತ್ರದ ಚಿತ್ರ ಬಿಡಿಸೋಣ.

@KTBS
NOT TO BE REPUBLISHED

೧೨. ಪಾತ್ರ ಏಕೆ ಇಷ್ಟವಾಯಿತು ಎಂಬುದರ ಬಗ್ಗೆ ಇಲ್ಲಿ ಬರೆಯೋಣ.

______

______

______

______

ಗಟ್ಟಿಯಾಗಿ ಓದಿದ ಕಥೆಗೊಂದು ಹೆಸರು ಕೊಡೋಣ :

______

## ೧೩. ಈ ಕಥೆಯನ್ನು ಓದಿ ಇದಕ್ಕೊಂದು ಚಿತ್ರ ರಚಿಸೋಣ.

ಒಂದು ಊರಿನಲ್ಲಿ ಭೀಮಪ್ಪ ತನ್ನ ಹೆಂಡತಿಯೊಂದಿಗೆ ವಾಸವಾಗಿದ್ದನು. ಅವನ ಬಳಿ ಒಂದು ಬಾತು ಕೋಳಿ ಇತ್ತು. ಈ ಬಾತು ಕೋಳಿಯನ್ನು ಪ್ರೀತಿಯಿಂದ ಸಾಕಿದ್ದನು. ಅದು ಪ್ರತಿದಿನ ಒಂದು ಚಿನ್ನದ ಮೊಟ್ಟೆ ಇಡುತ್ತಿತ್ತು. ಆ ಮೊಟ್ಟೆಯನ್ನು ಪೇಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಿ ಬಂದ ಹಣದಿಂದ ನೆಮ್ಮದಿಯ ಜೀವನ ನಡೆಸುತ್ತಿದ್ದರು. ಒಂದು ದಿನ ಭೀಮಪ್ಪ ದಂಪತಿಗೆ ಒಂದು ಉಪಾಯ ಹೊಳೆಯಿತು. ಅದೇನೆಂದರೆ ಪ್ರತಿದಿನ ಬಾತು ಕೋಳಿಯು ಒಂದು ಚಿನ್ನದ ಮೊಟ್ಟೆ ಇಡುತ್ತಿದೆ. ಅಂದ ಮೇಲೆ ಬಾತು ಕೋಳಿಯ ಹೊಟ್ಟೆ ಒಳಗೆ ಬಹಳ ಚಿನ್ನದ ಮೊಟ್ಟೆಗಳು ಇರಬಹುದು. ಎಲ್ಲ ಮೊಟ್ಟೆಗಳನ್ನು ಒಂದೇ ಬಾರಿ ಪಡೆದರೆ ಬೇಗನೆ ಶ್ರೀಮಂತರಾಗಬಹುದು ಎಂದು ಯೋಚಿಸಿದರು. ಅದಕ್ಕಾಗಿ ಬಾತು ಕೋಳಿಯನ್ನು ಕೊಲ್ಲಲು ನಿರ್ಧರಿಸಿದರು. ಮರುದಿನ ಬಾತು ಕೋಳಿಯನ್ನು ಹಿಡಿದು ಅದರ ಹೊಟ್ಟೆಯನ್ನು ಕೊಯ್ದರು. ಆದರೆ ಬಾತು ಕೋಳಿಯ ಹೊಟ್ಟೆಯಲ್ಲೇನಿದೆ!? ಒಂದೇ ಒಂದು ಚಿನ್ನದ ಮೊಟ್ಟೆ ಮಾತ್ರ ಇತ್ತು. ಅಯ್ಯೋ! ಅನ್ಯಾಯವಾಗಿ ಬಾತು ಕೋಳಿಯನ್ನು ಕೊಂದುಬಿಟ್ಟೆವಲ್ಲಾ! ಎಂದು ಮರುಗಿದರು. ಮುಂದೆ ಈ ದಂಪತಿಗಳು ಜೀವನ ನಡೆಸುವುದೇ ಕಷ್ಟಕರವಾಯಿತು.

@KTBS NOT TO BE REPUBLISHED

**ಓದಿದ ಕಥೆಗೊಂದು ಶೀರ್ಷಿಕೆ ನೀಡೋಣ.**

_______________________________________

## ೧೪. ಸಂಭಾಷಣೆಯನ್ನು ಓದಿ ಕಥೆ ಬರೆಯೋಣ.



(ಒಮ್ಮೆ ಮಕ್ಕಳು ಆಕಾಶದಲ್ಲಿ ಚಲಿಸುತ್ತಿದ್ದ ಮೋಡವನ್ನು ನೋಡುತ್ತಾ)
ಮಕ್ಕಳು : ಓಹೋ!! ಮೋಡ.. ಎಷ್ಟು ಚನ್ನಾಗಿದೆ!

ನವಿಲು: ಮೋಡಣ್ಣ! ಮೋಡಣ್ಣ! ನೀನು ಮಳೆ ಸುರಿಸುವೆಯಾ? ನಾನು ಕುಣಿಯಬೇಕು.
(ಮೋಡ ನಗುತ್ತಾ ಮುಂದೆ ಹೋಯಿತು)





ರೈತ: ಮೋಡಣ್ಣ! ಮೋಡಣ್ಣ! ನೀನು ಮಳೆ ಸುರಿಸುವೆಯಾ? ನಾನು ಬೆಳೆಗಳನ್ನು ಬೆಳೆಯಬೇಕು.
(ಮೋಡ ನಗುತ್ತಾ ಮುಂದೆ ಹೋಯಿತು)

© KTBS NOT TO BE REPUBLISHED

ಹುಡುಗ: ಮೋಡಣ್ಣ! ಮೋಡಣ್ಣ! ನೀನು ಮಳೆ ಸುರಿಸುವೆಯಾ? ನಾನು ನೀರಿನಲ್ಲಿ ಕಾಗದದ ದೋಣಿ ಬಿಡಬೇಕು.
(ಮೋಡ ನಗುತ್ತಾ ಮುಂದೆ ಹೋಯಿತು)





ಕೊನೆಗೆ ಮೋಡ ಖುಷಿಯಿಂದ ಮಳೆ ಸುರಿಸಿತು. ನವಿಲು ಕುಣಿಯಿತು. ರೈತ ಬೆಳೆ ಬೆಳೆದ. ಹುಡುಗ ದೋಣಿಯನ್ನು ತೇಲಿ ಬಿಟ್ಟ. ಎಲ್ಲರೂ ಸಂತೋಷಪಟ್ಟರು.

೧೫. ಓದಿದ ಸಂಭಾಷಣೆಯನ್ನು ಕಥೆಯ ರೂಪದಲ್ಲಿ ಬರೆದು, ಶೀರ್ಷಿಕೆ ನೀಡೋಣ.

೧೬. ಈ ಪದ್ಯವನ್ನು ಕಥೆಯ ರೂಪದಲ್ಲಿ ಬರೆದು, ಶೀರ್ಷಿಕೆ ನೀಡೋಣ.

ಕಪ್ಪೆ ಕರಕರ
ತುಪ್ಪ ಜಲಿಜಲಿ
ಮಾವಿನ ವಾಟೆ
ಮರದಲಿ ಕೋಟೆ
ಹದ್ದಿನ ಕೈಯಲಿ
ಸುದ್ದಿ ಕಳುಹಿಸಿ
ಕಾಗೆಯ ಕೈಯಲ್ಲಿ
ಕಂಕಣ ಕಟ್ಟಿಸಿ
ನಳ್ಳಿಯ ಕೈಯಲಿ
ನಗಾರಿ ಹೊಡಿಸಿ
ಸೊಳ್ಳೆಯ ಕೈಯಲಿ
ಸೋಬಾನೆ ಹೇಳಿಸಿ
ಸಣ್ಣೆ ಮದುವೆ ಶನಿವಾರ
ಊಟಕ್ಕೆ ಬನ್ನಿ
ಬುಧವಾರ

@KTBS
NOT TO BE REPUBLISHED

## ೧೭. ಚಿತ್ರಕ್ಕೊಂದು ಕಥೆ ರಚಿಸೋಣ.



@KTBS NOT TO BE REPUBLISHED

## ೧೮. ಕಥೆಯನ್ನು ಓದೋಣ.



ಒಂದು ಕಾಡಿನಲ್ಲಿ ಒಂದು ಮರಿ ಆನೆ ಮತ್ತು ಒಂದು ಪುಟ್ಟ ಮೊಲ ವಾಸವಾಗಿದ್ದವು. ಆನೆಯ ಹೆಸರು ಗುಂಡಣ್ಣ ಮತ್ತು ಪುಟ್ಟ ಮೊಲದ ಹೆಸರು ಚೋಟು.

ಒಂದು ದಿನ ಗುಂಡಣ್ಣನು 'ಇವತ್ತು ನಾವು ಒಂದು ಹೊಸ ಆಟ ಆಡೋಣ' ಎಂದು ಚೋಟುವನ್ನು ಕೇಳಿತು.





'ನೀನು ಕುಳಿತುಕೊ, ನಾನು ಒಂದೇ ನೆಗೆತದಲ್ಲಿ ನಿನ್ನ ಬೆನ್ನ ಮೇಲೆ ಹಾರಿ ಕೂರುವೆ' ಎಂದು ಚೋಟು ಗುಂಡಣ್ಣನ ಬೆನ್ನ ಮೇಲೆ ಕುಳಿತಿತು.

'ಈಗ ನಾನು ನಿನ್ನ ಬೆನ್ನ ಮೇಲೆ ಹಾರಿ ಕೂರುವೆ' ಎಂದಿತು ಗುಂಡಣ್ಣ. ಚೋಟು ಹೆದರಿ ಬೆವರತೊಡಗಿತು.





ಅಷ್ಟರಲ್ಲಿ ಅಲ್ಲೇ ಇದ್ದ ತೆಂಗಿನ ಮರದಿಂದ ತೆಂಗಿನ ಕಾಯಿಗಳು ಗುಂಡಣ್ಣನ ಮೇಲೆ ಧಪಧಪ ಉದುರಿದವು. ಚೋಟು 'ಸದ್ಯ ನಾನು ತಪ್ಪಿಸಿಕೊಂಡೆ' ಎಂದು ಓಡಿತು.

© KTBS NOT TO BE REPUBLISHED

❋ ಓದಿದ ಕಥೆಯ ಸಾರಾಂಶವನ್ನು ಬರೆದು, ಶೀರ್ಷಿಕೆ ನೀಡೋಣ.

______________________________

______________________________

______________________________

______________________________

______________________________

______________________________

______________________________

@KTBS
NOT TO BE REPUBLISHED

❋ ಸಂಭಾಷಣೆಯನ್ನು ಪೂರ್ಣಗೊಳಿಸೋಣ.

ಚೋಟು: "ಗುಂಡಣ್ಣ ಇವತ್ತು ಹೊಸ ಆಟ ಆಡೋಣವೇ?"

ಗುಂಡ: "ಆಡೋಣ"

ಚೋಟು: ಸರಿ ನೀನು ______________________________

ಗುಂಡ: ______________________________

ಚೋಟು: ______________________________

ಗುಂಡ: ______________________________

ಚೋಟು: ______________________________

ಗುಂಡ: ______________________________

## ೧೯. ಇದುವರೆಗೂ ಕಲಿತಿರುವ ಹೊಸ ಪದಗಳ ಉಕ್ತಲೇಖನವನ್ನು ತೆಗೆದುಕೊಳ್ಳೋಣ.

| ಕ್ರ.ಸಂ | ಪದಗಳು | ಕ್ರ.ಸಂ | ಪದಗಳು |
|---|---|---|---|
| 1. | | 11. | |
| 2. | | 12. | |
| 3. | | 13. | |
| 4. | | 14. | |
| 5. | | 15. | |
| 6. | | 16. | |
| 7. | | 17. | |
| 8. | | 18. | |
| 9. | | 19. | |
| 10. | | 20. | |

@KTBS NOT TO BE REPUBLISHED

**ತಪ್ಪಾದ ಪದಗಳನ್ನು ಸರಿಪಡಿಸಿ ಬರೆಯೋಣ.**

✶ ಸುಗಮಕಾರರು ಪಠ್ಯದಲ್ಲಿ ಕಲಿತ ಪದಗಳನ್ನು ಉಕ್ತಲೇಖನ ನೀಡಿ, ದೃಢೀಕರಿಸಿ, ಹಿಮ್ಮಾಹಿತಿ ನೀಡುವುದು.

**೨೦. ನಿಯೋಜಿತ ಕಾರ್ಯ :** ವಿಶೇಷ ಎನಿಸುವ ಚಿತ್ರಗಳನ್ನು ಸಂಗ್ರಹಿಸಿ ಬಿಳಿ ಹಾಳೆಯ ಮೇಲೆ ಅಂಟಿಸೋಣ. (ವರ್ಲಿಕಲೆ, ಜಾನಪದ ಕಲೆ, ಗೊಂಬೆ ಕಲೆ, ತೆಂಗಿನ ಚಿಪ್ಪಿನ ಕಲೆ, ಬಟ್ಟೆ, ಪಿಂಗಾಣಿ ಮೇಲಿನ ಕಸೂತಿ ಕಲೆ ಇತ್ಯಾದಿ)

✦ ಸಂಗ್ರಹಿಸಿದ ಕಲೆಯ ಬಗ್ಗೆ ಇಲ್ಲಿ ಬರೆಯೋಣ.

@KTBS
NOT TO BE REPUBLISHED

# ೪. ದುಡುಕಿನ ಫಲ

**ಪ್ರವೇಶ:** ಈ ಹಾಡನ್ನು ಮಕ್ಕಳಿಗೆ ಹೇಳಿಕೊಟ್ಟು, ಅದರ ಬಗ್ಗೆ ಮಾತನಾಡಲು ಪ್ರೇರೇಪಿಸುವುದು.

ಪುಟಾಣಿ ಕರುವೊಂದು ನಮ್ಮನೆಲಿದೆ
ಕಟ್ಟಿದರೂ ನಿಲ್ಲದೇನೆ ಕುಣಿದಾಡುತ್ತೆ
ಹಗ್ಗದಂತೆ ಬಾಲನೆತ್ತಿ ಕುಣಿದಾಡುತ್ತೆ
ಬಗ್ಗಿ ಬಗ್ಗಿ ನೆಲ ಮೂಸಿ ಜಿಗಿದಾಡುತ್ತೆ
ದೊಡ್ಡದಾಗಿ ಕಣ್ಣು ಬಿಟ್ಟು ನನ್ನೇ ನೋಡುತ್ತೆ
ಬೆಣ್ಣೆಯಂಥ ಮೈ ಮುಟ್ಟೋಕೆ ಜುಮ್ಮೆನ್ನುತ್ತೆ
ಕಾಲನೆತ್ತಿ ಅಮ್ಮನ ಹತ್ತಿರ ಓಡಿ ಹೋಗುತ್ತೆ
ಅಮ್ಮ ಅದನ್ನು ನೆಕ್ಕಿ ನೆಕ್ಕಿ ಮುದ್ದು ಮಾಡುತ್ತೆ

ಹಿಂದೊಂದೂರಲಿ ಇದ್ದಳು ನಾರಿ।
ಮುಂಗುಸಿಯೊಂದ ಸಾಕಿದಳು॥
ಕೊಡವನು ಹಿಡಿದು ನೀರನು ತರಲು।
ನದಿಯಾ ತೀರಕೆ ಸಾಗಿದಳು॥



ತೊಟ್ಟಿಲೊಳಗಿನ ಪುಟ್ಟ ಮಗುವದು।
ಕೇಕೆಯ ಹಾಕಿತು ಮುದದಿಂದ॥
ಮುಂಗುಸಿ ನೋಡಿತು ಹಗ್ಗದ ಗುಂಟ।
ಸರಿಯುತಲಿದ್ದ ಹಾವೊಂದ॥




ಹಾವನು ಕಂಡು ಮುಂಗುಸಿ ತಾನು।
ಸರ ಸರ ಏರಿತು ಹಗ್ಗವನು॥
ವೈರಿಯ ಹಿಡಿದು ಹಲ್ಲಲಿ ಕಡಿದು।
ಉಳಿಸಿತು ಮಗುವಿನ ಪ್ರಾಣವನು॥



ನೀರಿಗೆ ಹೋದ ನಾರಿಯು ತಾನು।
ಮರಳಿ ಬಂದಳು ನದಿಯಿಂದ॥
ರಕ್ತವು ಮೆತ್ತಿದ ಮುಂಗುಸಿ ಕಂಡು।
ಕಿರುಚಿದಳಾಗಲೇ ಭಯದಿಂದ॥

NOT TO BE REPUBLISHED @KTBS

ಮಗುವನು ಕೊಂದಿದೆ ಮುಂಗುಸಿ ಎಂದು।
ಭಾವಿಸಿಕೊಂಡಳು ಮನದಲ್ಲಿ॥
ತುಂಬಿದ ಕೊಡವನು ಕೋಪದಿ ಎತ್ತಿ।
ಹೊಡೆದಳು ಮುಂಗುಸಿ ತಲೆಯಲ್ಲಿ॥



ಕಿಲಕಿಲ ನಗುವ ಮಗುವನ್ನು ತಾನು।
ಒಳಗಡೆ ಕಂಡಳು ತೊಟ್ಟಿಲಲಿ॥
ಪಕ್ಕದಿ ಸತ್ತ ಹಾವನು ನೋಡಿ।
ಕುಸಿದಳು ನೆಲಕೆ ದುಃಖದಲಿ॥

ಮಗುವನು ಉಳಿಸಿದ ಮುಂಗುಸಿ ಕೊಂದೆ।
ಅಯ್ಯೋ! ಪಾಪವ ಮಾಡಿದೆನು॥
ನಿಜವನು ತಿಳಿಯದೆ ಕೋಪದಿ ನಾನು।
ಅವಸರ ಮಾಡಿ ದುಡುಕಿದೆನು॥



'ತಾಳಿದ ಮಾನವ ಬಾಳುವ'ನೆಂಬ।
ಗಾದೆಯ ಮಾತದು ಬಲು ಚಂದ॥
'ದುಡುಕೇ ಕೇಡಿನ ಮೂಲ'ವು ಎಂಬ।
ನಿಜವನು ಅರಿಯೋ ನೀ ಕಂದ॥

– ಲಕ್ಷ್ಮಣ ಅಳವಂಡಿ

NOT TO BE REPUBLISHED ©KTBS

| ಹೀಗೆ ಮಾಡು : ಕಥನ ಕವನಗಳನ್ನು ಹಿರಿಯರ ಸಹಾಯದಿಂದ ಸಂಗ್ರಹಿಸಿ, ಆಲಿಸಿ ಆನಂದಿಸು. |
|---|



ಶ್ರೀ. ಲಕ್ಷ್ಮಣ. ಎಸ್. ಪಾಟೀಲ, ಏಪ್ರಿಲ್ 16, 1942ರಲ್ಲಿ ಜನಿಸಿದ ಇವರು ಅಳವಂಡಿ ಮತ್ತು ಕವಲೂರುಗಳಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನೂ, ಕೊಪ್ಪಳ, ಗುಲ್ಬರ್ಗಾ ಮತ್ತು ಬೆಂಗಳೂರುಗಳಲ್ಲಿ ತಮ್ಮ ಉನ್ನತ ಶಿಕ್ಷಣವನ್ನೂ ಪೂರ್ಣಗೊಳಿಸಿದರು. ವೃತ್ತಿಯಲ್ಲಿ ಇತಿಹಾಸ ಉಪನ್ಯಾಸಕರಾಗಿದ್ದರೂ ಸಾಹಿತ್ಯ ಓದುವುದು ಮತ್ತು ರಚಿಸುವುದೆಂದರೆ ಎಲ್ಲಿಲ್ಲದ ಆಸಕ್ತಿ. ಇವರು 'ಲಕ್ಷ್ಮಣ ಅಳವಂಡಿ' ಕಾವ್ಯನಾಮದ ಮೂಲಕ ಅನೇಕ ಸಾಹಿತ್ಯಗಳನ್ನು ರಚಿಸಿದ್ದಾರೆ. ಇವರು ಅನೇಕ ಕವನ ಸಂಕಲನಗಳನ್ನು ಹಾಗೂ ಐತಿಹಾಸಿಕ ಸಾಹಿತ್ಯಗಳನ್ನು ರಚಿಸಿದ್ದಾರೆ. ಇವರು ರಚಿಸಿರುವ ಅನೇಕ ಬಿಡಿ ಕವನಗಳಲ್ಲಿ 'ದುಡುಕಿನ ಫಲ' ಕವನವೂ ಒಂದಾಗಿದೆ. ಶ್ರೀಯುತರು ಆಗಸ್ಟ್ 10, 2009ರಲ್ಲಿ ಮರಣ ಹೊಂದಿದರು.

## ೧. ಸ್ವಂತ ವಾಕ್ಯಗಳನ್ನು ರಚಿಸೋಣ.

**ಮುದ:** ______________________________

**ದುಡುಕು:** ______________________________

**ಮೆತ್ತಿದ:** ______________________________

೨. ಪದಗಳನ್ನು ಗಮನಿಸಿ, ಒಂದರ ಹಲವು ರೂಪವನ್ನು ಬರೆಯೋಣ

| ಒಂದು | ಹಲವು | ಒಂದು | ಹಲವು |
|---|---|---|---|
| ಪ್ರಾಣಿ | | ಪಕ್ಷಿ | |
| ನದಿ | | ಮನೆ | |
| ಮರ | | ಹಣ್ಣು | |

೩. 'ದುಡುಕಿನ ಫಲ' ಪದ್ಯದಲ್ಲಿ ಬರುವ ಈ ಪಾತ್ರಗಳ ಬಗ್ಗೆ ಮಾತನಾಡೋಣ.

| | | |
|---|---|---|
|  |  |  |

೪. 'ದುಡುಕಿನ ಫಲ' ಈ ಪದ್ಯದಲ್ಲಿ ಇಷ್ಟವಾದ ಚಿತ್ರವನ್ನು ಬಿಡಿಸಿ, ಅದರ ಬಗ್ಗೆ ಮಾತನಾಡೋಣ.

@KTBS NOT TO BE REPUBLISHED

೫. 'ದುಡುಕಿನ ಫಲ' ಈ ಕಥನ ಕವನವನ್ನು ಸಾಮೂಹಿಕವಾಗಿ ಹಾಡಿ, ಕಥೆಯ ರೂಪದಲ್ಲಿ ಬರೆಯೋಣ.

@KTBS
NOT TO BE REPUBLISHED

ಹೀಗೆ ಮಾಡು : ನೀನು ಕೇಳಿರುವ ಯಾವುದಾದರೊಂದು ಕಥೆಯನ್ನು ಹಾಳೆಯಲ್ಲಿ ಬರೆದು ತರಗತಿಯಲ್ಲಿ ಪ್ರದರ್ಶಿಸು.

## ೬. ಕಥೆಯಲ್ಲಿ ಇಷ್ಟವಾದ ಪಾತ್ರ ಯಾವುದು ಮತ್ತು ಏಕೆ ಎಂದು ವಿವರಿಸೋಣ.

ರವಿ: ಕಥೆ ಚೆನ್ನಾಗಿತ್ತಲ್ವಾ?

ಸುಮ: ಹೌದು! ಅದರಲ್ಲಿ ನನಗೆ 'ಮುಂಗುಸಿಯ' ಪಾತ್ರ ಇಷ್ಟವಾಯಿತು.



ಏಕೆಂದರೆ "ಮುಂಗುಸಿಯು ಹಾವನ್ನು ಸಾಯಿಸಿ ಮಗುವಿನ ಜೀವವನ್ನು ಉಳಿಸಿತು."

ನೀನೂ ಕಥೆಯನ್ನು ಕೇಳಿಸಿಕೊಂಡಿರುವೆ. ನಿನ್ನ ಇಷ್ಟದ ಪಾತ್ರ ಯಾವುದು? ಮತ್ತು ಏಕೆ? ಹೇಳು.

ನನಗೆ ____________ ಪಾತ್ರ ಇಷ್ಟವಾಯಿತು. ಏಕೆಂದರೆ ____________________

____________________________________________________________

____________________________________________________________

____________________________________________________________

____________________________________________________________

@KTBS NOT TO BE REPUBLISHED

೭. ಇವುಗಳಲ್ಲಿ ಇಷ್ಟದ ಒಂದನ್ನು ಆಯ್ಕೆ ಮಾಡಿ ಏಕೆ ಇಷ್ಟ ಹೇಳೋಣ.

| | | | |
|---|---|---|---|
|  |  |  |  |
| ಚಿತ್ರ ಬಿಡಿಸುವುದು | ಆಟವಾಡುವುದು | ಶಾಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು | ಹಾಡುವುದು |

೮. ಶಾಲೆಯಲ್ಲಿನ ಕಾರ್ಯಕ್ರಮಗಳಲ್ಲಿ ಇಷ್ಟವಾದ ಕಾರ್ಯಕ್ರಮದ ಬಗ್ಗೆ ಗೆಳೆಯರೊಂದಿಗೆ ಹಂಚಿಕೊಳ್ಳೋಣ ಮತ್ತು ಬರೆಯೋಣ.

@KTBS
NOT TO BE REPUBLISHED

೯. ಕುಟುಂಬ ಸದಸ್ಯರೊಬ್ಬರ ಇಡೀ ದಿನದ ಕಾರ್ಯ ಚಟುವಟಿಕೆಗಳ ಬಗ್ಗೆ ತರಗತಿಯಲ್ಲಿ ಹಂಚಿಕೊಳ್ಳೋಣ ಮತ್ತು ಬರೆಯೋಣ.

@KTBS NOT TO BE REPUBLISHED

೧೦. ಪಾತ್ರವೇ ನಾವಾಗಿ ಮಾತನಾಡೋಣ...

ನಾನೊಂದು ಮೀನು............



**ಹೀಗೆ ಮಾಡು:** ಇದೇ ರೀತಿಯಲ್ಲಿ ನೀನು ಬೇರೆ ಬೇರೆ ಪಾತ್ರವಾಗಿ ಮಾತನಾಡು.

## ೧೧. ನಿಮಗಾಗಿರುವ ಈ ರೀತಿಯ ಅನುಭವದ ಬಗ್ಗೆ ಚರ್ಚಿಸೋಣ.



ಯಾವುದಾದರೊಂದು ಸನ್ನಿವೇಶದ ಅನುಭವಗಳನ್ನು ಇಲ್ಲಿ ಬರೆಯೋಣ.

@KTBS NOT TO BE REPUBLISHED

## ೧೨. ಚಿತ್ರಗಳನ್ನು ಅನುಕ್ರಮವಾಗಿ ಜೋಡಿಸಿ. ಸಂಖ್ಯೆ ನೀಡಿ, ಕಥೆ ಹೇಳೋಣ.

ಸಿಂಹದ ಕೂಗನ್ನು ಕೇಳಿ ಬಿಲದಲ್ಲಿದ್ದ ಇಲಿಯು ಹೊರ ಬಂದಿತು. ಸಿಂಹವು ಬಲೆಯಲ್ಲಿ ಬಿದ್ದಿರುವುದನ್ನು ನೋಡಿತು. ಕೂಡಲೇ ತನ್ನ ಹಲ್ಲುಗಳಿಂದ ಬಲೆಯನ್ನು ತುಂಡರಿಸಿತು. ಸಿಂಹವು ಬಲೆಯಿಂದ ಹೊರಬಂದಿತು. ಸಿಂಹಕ್ಕೆ ಸಂತೋಷವಾಯಿತು. ಇಲಿಯನ್ನು ಗೆಳೆಯನೆಂದು ಒಪ್ಪಿಕೊಂಡಿತು.





ಇಲಿಯ ಆಟದಿಂದ ಸಿಂಹಕ್ಕೆ ಎಚ್ಚರವಾಯಿತು. ಕೋಪಗೊಂಡು "ನಿನ್ನನ್ನು ತಿಂದು ಹಾಕುವೆ" ಎಂದು ಘರ್ಜಿಸಿತು. ಆಗ ಇಲಿಯು ಕೈಮುಗಿದು "ಸಿಂಹರಾಜ, ತಪ್ಪಾಯಿತು ಕ್ಷಮಿಸಿ! ಇನ್ನೊಮ್ಮೆ ಈ ರೀತಿ ಮಾಡುವುದಿಲ್ಲ. ನಿಮಗೆ ಕಷ್ಟಕಾಲದಲ್ಲಿ ನೆರವಾಗುತ್ತೇನೆ" ಎಂದಿತು. ಸಿಂಹವು ಕನಿಕರದಿಂದ ಬಿಟ್ಟಿತು.

ಮರದ ಕೆಳಗೆ ಸಿಂಹವೊಂದು ನಿದ್ರಿಸುತ್ತಿತ್ತು. ಸಮೀಪದ ಬಿಲದಿಂದ ಹೊರ ಬಂದ ಇಲಿಯು ಅದರ ಮೈಮೇಲೆ ಆಟವಾಡುತ್ತಿತ್ತು.





ಒಮ್ಮೆ ಸಿಂಹವು ಬೇಟೆಗಾರನ ಬಲೆಗೆ ಸಿಕ್ಕಿ ಬಿದ್ದಿತು. ಅದರಿಂದ ಹೊರ ಬರಲಾರದೆ ಸಹಾಯಕ್ಕಾಗಿ ಕೂಗಿಕೊಂಡಿತು.

**ಹೀಗೆ ಮಾಡು:** ಈ ಕಥೆಯನ್ನು ಹಾಳೆಯಲ್ಲಿ ಬರೆದು ತರಗತಿಯಲ್ಲಿ ಪ್ರದರ್ಶಿಸು.

©KTBS NOT TO BE REPUBLISHED

## ೧೫. ಇದುವರೆಗೂ ಕಲಿತಿರುವ ಹೊಸ ಪದಗಳ ಉಕ್ತಲೇಖನವನ್ನು ತೆಗೆದುಕೊಳ್ಳೋಣ.

| ಕ್ರ.ಸಂ | ಪದಗಳು | ಕ್ರ.ಸಂ | ಪದಗಳು |
|---|---|---|---|
| 1. | | 11. | |
| 2. | | 12. | |
| 3. | | 13. | |
| 4. | | 14. | |
| 5. | | 15. | |
| 6. | | 16. | |
| 7. | | 17. | |
| 8. | | 18. | |
| 9. | | 19. | |
| 10. | | 20. | |

@KTBS
NOT TO BE REPUBLISHED

**ತಪ್ಪಾದ ಪದಗಳನ್ನು ಸರಿಪಡಿಸಿ ಬರೆಯೋಣ.**

| | |
|---|---|
| | |
| | |
| | |
| | |

★ ಸುಗಮಕಾರರು ಪಠ್ಯದಲ್ಲಿ ಕಲಿತ ಪದಗಳನ್ನು ಉಕ್ತಲೇಖನ ನೀಡಿ, ದೃಢೀಕರಿಸಿ, ಹಿಮ್ಮಾಹಿತಿ ನೀಡುವುದು.

✦✦✦✦

## ಮೌಲ್ಯಾಂಕನ–ಸೂಚಿತ ಕಲಿಕಾ ಫಲಗಳು

| ಕಲಿಕಾಂಶ | ಕಲಿಕಾಫಲಗಳು |
|---|---|
| ಕಾಡಿಕೊಂದು ಟಿ.ವಿ ತರೋಣ | ತಮಗೆ ಗೊತ್ತಿರುವ ಘಟನೆ/ಸನ್ನಿವೇಶ/ರೇಡಿಯೋ/ದೂರದರ್ಶನ ಕಾರ್ಯಕ್ರಮಗಳ ಬಗ್ಗೆ ಇಷ್ಟ–ಇಷ್ಟವಿಲ್ಲದ ಕುರಿತು ಶಾಲಾ ಭಾಷೆ / ಮನೆ ಭಾಷೆಯಲ್ಲಿ ಮಾತನಾಡುವರು. |
| ಅಮ್ಮಅಮ್ಮ (ಪದ್ಯ) | ನೀಡಿರುವ ಕಥೆ/ ಪದ್ಯಗಳನ್ನು ಮೌಖಿಕವಾಗಿ ಮುಂದುವರಿಸುವರು. |
| | ತಮ್ಮ ಸುತ್ತಮುತ್ತಲಿನ ಗೊತ್ತಿರುವ ಕಥೆಗಳು, ಪದ್ಯಗಳು, ಜಾಹೀರಾತುಗಳು, ಭಿತ್ತಿಪತ್ರಗಳು ಇತ್ಯಾದಿಗಳನ್ನು ಉದಾಹರಣೆಯಾಗಿ ಬಳಸಿ ಮಾತುಕತೆ ನಡೆಸುವರು. |
| ಸ್ವಾತಂತ್ರ್ಯ ದಿನಾಚರಣೆ | ಪರಿಚಿತವಿರುವ ಕಥೆ, ಪದ್ಯಗಳಲ್ಲಿನ ಪಾತ್ರಗಳು, ವಿಷಯವಸ್ತು / ಕಲಿಕಾಂಶದಲ್ಲಿ ಬಳಕೆಯಾಗಿರುವ ಚಿತ್ರಗಳು ಮುಂತಾದವುಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವರು ಮತ್ತು ಅವುಗಳ ಬಗ್ಗೆ ಪ್ರಶ್ನಿಸುವರು. |
| | ಬೆಳಗಿನ ಶುಭಾಶಯಗಳು, ಕುಟುಂಬ ಸದಸ್ಯರ ಜೊತೆಗೆ ನಡೆಸಲಾದ ಸಂಭಾಷಣೆಗಳು ಇತ್ಯಾದಿಗಳ ಬಗ್ಗೆ ಮಾತನಾಡುವರು. ತಮಗಿಷ್ಟವಾದ ಚಟುವಟಿಕೆಗಳನ್ನು ಕೆಲವು ಪದಗಳಲ್ಲಿ, ದೃಷ್ಟಾಂತಗಳ ರೂಪದಲ್ಲಿ ನೋಟ್ ಪುಸ್ತಕ / ಕಪ್ಪುಹಲಗೆ / ಪ್ರದರ್ಶನ ಫಲಕಗಳಲ್ಲಿ ಬರೆದು ಹಾಕುವರು. |
| ದುಡುಕಿನ ಫಲ (ಪದ್ಯ) | ಸೂಕ್ತ ಸ್ವರಭಾರ, ವೇಗ, ನಿರರ್ಗಳತೆ ಹಾಗೂ ಶೈಲಿಯೊಂದಿಗೆ ತಮಗಿಷ್ಟವಾದ ಹಾಸ್ಯಮಯವಾದ ಕಥೆಗಳನ್ನು, ಪದ್ಯಗಳನ್ನು ನಿರೂಪಿಸುವರು. |
| | ಪದ್ಯ/ಕವಿತೆ/ಹಾಡುಗಳಲ್ಲಿನ ಲಯವನ್ನು ಅರ್ಥಮಾಡಿಕೊಳ್ಳುವಾಗ, ಭಾಷಾ ಆಟಗಳಲ್ಲಿ ತೊಡಗಿಕೊಳ್ಳುವಾಗ, ಒಗಟುಗಳನ್ನು ಬಿಡಿಸುವಾಗ ಆಸಕ್ತಿಯನ್ನು ಹೊಂದುವರು. |

**ಸೂಚನೆ:** ಮೊದಲ 03 ಕಲಿಕಾ ಫಲಗಳನ್ನು FA-01 ರಲ್ಲಿ, 04 ಮತ್ತು 05ನೇ ಕಲಿಕಾ ಫಲಗಳನ್ನು FA-02 ರಲ್ಲಿ ಹಾಗೂ 01 ರಿಂದ 07ರವರೆಗಿನ ಕಲಿಕಾ ಫಲಗಳನ್ನು SA-01 ರಲ್ಲಿ ಪರಿಗಣಿಸಿ ಮೌಲ್ಯಾಂಕನಕ್ಕೆ ಸಿದ್ಧತೆ ಮಾಡಿಕೊಳ್ಳುವುದು.

NOT TO BE REPUBLISHED @KTBS